ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಮೇ 24, 2021

ಸಂಪುಟ : 48 ಸಂಚಿಕೆ : 10 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com

## ಸೋಂಕು ಇಳಿಕೆ, ಸಾವಿನಲ್ಲಿ ದಾಖಲೆ

### ರಾಜ್ಯದಲ್ಲಿ ಒಂದೇ ದಿನ 626 ಕೊರೊನಾ ಸಾವು

ಬೆಂಗಳೂರು, ಮೇ 23 - ರಾಜ್ಯದಲ್ಲಿ ಭಾನುವಾರ 25,979 ಕೊರೊನಾ ಸೋಂಕಿತರು ಪತ್ತೆಯಾಗಿದ್ದು, ಇದೇ ದಿನ 35,573 ಜನ ಸೋಂಕಿನಿಂದ ಗುಣಮುಖರಾಗಿದ್ದಾರೆ ಎಂದು ರಾಜ್ಯ ಆರೋಗ್ಯ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರಾಜ್ಯದಲ್ಲಿ ಟೆಸ್ಟ್ ನಡೆಸಿದಾಗ ಸೋಂಕಿತರು ಕಂಡು ಬರುವ ಪ್ರಮಾಣ ಶೇ.20.7ರಷ್ಟಿದೆ ಎಂದು ಇಲಾಖೆ ಹೇಳಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ರಾಜ್ಯ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ಕೊರೊನಾ ಅಂಕಿ-ಅಂಶಗಳಲ್ಲಿ ಹಲವಾರು ಸಕಾರಾತ್ಮಕ ವಿಷಯಗಳಿವೆ. ಸೋಂಕಿತರಿಗಿಂತ ಗುಣಮುಖರಾದವರ ಸಂಖ್ಯೆ ಹೆಚ್ಚಾಗಿದೆ. ಬಹಳ ದಿನಗಳ ನಂತರ ಸೋಂಕಿತರ ಸಂಖ್ಯೆ 25 ಸಾವಿರಕ್ಕೂ ಕಡಿಮೆಯಾಗಿದೆ. ಪಾಸಿಟಿವ್ ದರ ಶೇ.20ಕ್ಕೆ ಇಳಿದಿದೆ. ಟೆಸ್ಟ್ ಸಂಖ್ಯೆ 1.25 ಲಕ್ಷದಷ್ಟು ಉತ್ತಮವಾಗಿದೆ ಎಂದಿದ್ದಾರೆ. ಆದರೆ, ಇದೇ ದಿನ 626 ಜನ ಕೊರೊನಾದಿಂದ ಸಾವನ್ನಪ್ಪಿದ್ದಾರೆ. ಇದುವರೆಗೆ ಒಂದೇ ದಿನ ಕೊರೊನಾದಿಂದ ಇಷ್ಟು ಸಂಖ್ಯೆಯ ಜನರು ಸಾವನ್ನಪ್ಪಿರಲಿಲ್ಲ. ಈ ಹಿಂದೆ, ಮೇ 10ರಂದು ಒಂದೇ ದಿನ 596 ಜನ ಸೋಂಕಿನಿಂದ ಸಾವನ್ನಪ್ಪಿದ್ದರು.

ಬೆಂಗಳೂರು ನಗರದಲ್ಲಿ 7,494 ಸೋಂಕಿತರು ಕಂಡು ಬಂದಿದ್ದಾರೆ ಹಾಗೂ 12,407 ಜನ ಗುಣವಾಗಿದ್ದಾರೆ. ನಗರದಲ್ಲಿ 362 ಜನ ಸೋಂಕಿನಿಂದ ಸಾವನ್ನಪ್ಪಿದ್ದಾರೆ.

### ದೇಶದಲ್ಲಿ ಏಳು ದಿನಗಳಿಂದ ಕೊರೊನಾ ಸೋಂಕಿತರ ಸಂಖ್ಯೆ 3 ಲಕ್ಷಕ್ಕೂ ಕಡಿಮೆ

ನವದೆಹಲಿ, ಮೇ 23 - ಭಾರತದಲ್ಲಿ ಪ್ರತಿದಿನ ಕಂಡು ಬರುತ್ತಿರುವ ಕೊರನಾ ವೈರಸ್ ಪ್ರಕರಣಗಳ ಸಂಖ್ಯೆ ಸತತ ಏಳನೇ ದಿನ 3 ಲಕ್ಷಕ್ಕೂ ಕಡಿಮೆ ಇದೆ. ಭಾನುವಾರ 2.4 ಲಕ್ಷ ಹೊಸ ಪ್ರಕರಣಗಳು ಕಂಡು ಬಂದಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ಕೊರೊನಾದಿಂದ 3,741 ಸಾವುಗಳು ಸಂಭವಿಸಿವೆ. ದೇಶದಲ್ಲಿ ಒಟ್ಟಾರೆ 2.99 ಲಕ್ಷ ಸಾವುಗಳು ಸಂಭವಿಸಿವೆ. ದೇಶದಲ್ಲಿ ಸಕ್ರಿಯ ಸೋಂಕು ಪ್ರಕರಣಗಳ ಸಂಖ್ಯೆ ಈಗ 28.05 ಲಕ್ಷಕ್ಕೆ ಇಳಿಕೆಯಾಗಿದೆ. ಒಟ್ಟು ಸಕ್ರಿಯ ಪ್ರಕರಣಗಳ ಪ್ರಮಾಣ ಶೇ.10.57ಕ್ಕೆ ಇಳಿಕೆಯಾಗಿದೆ. ಭಾನುವಾರ ಕೊರೊನಾದಿಂದ 3.55 ಲಕ್ಷ ಜನರು ಚೇತರಿಸಿಕೊಂಡಿದ್ದಾರೆ.

## ರಾಜ್ಯಗಳಿಗೆ ಲಸಿಕೆ ಪೂರೈಸಲು ಮೊಡೆರ್ನಾ ನಕಾರ

ಚಂಡೀಘಡ, ಮೇ 23 - ಪಂಜಾಬ್ ಸರ್ಕಾರಕ್ಕೆ ನೇರವಾಗಿ ಲಸಿಕೆ ಪೂರೈಸಲು ನಿರಾಕರಿಸಿರುವ ಅಮೆರಿಕದ ಲಸಿಕಾ ಉತ್ಪಾದನಾ ಕಂಪನಿಯಾದ ಮೊಡೆರ್ನಾ, ಕೇಂದ್ರ ಸರ್ಕಾರದ ಜೊತೆ ಮಾತ್ರ ವ್ಯವಹರಿಸುವುದಾಗಿ ತಿಳಿಸಿದೆ ಎಂದು ರಾಜ್ಯದ ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ.




ಪಂಜಾಬ್ ಮುಖ್ಯಮಂತ್ರಿ ಅಮರೀಂದರ್ ಸಿಂಗ್ ಅವರ ನಿರ್ದೇಶನದಂತೆ, ಲಸಿಕೆ ನೇರ ಖರೀದಿಗಾಗಿ ಉತ್ಪಾದಕರನ್ನು ಸಂಪರ್ಕಿಸಲಾಗಿತ್ತು. ಸ್ಪುಟ್ನಿಕ್ ವಿ, ಫೈಜರ್, ಮೊಡೆರ್ನಾ ಹಾಗೂ ಜಾನ್ಸನ್ ಅಂಡ್ ಜಾನ್ಸನ್ ಕಂಪನಿಗಳಿಗೆ ಈ ಬಗ್ಗೆ ಪತ್ರ ಬರೆಯಲಾಗಿತ್ತು ಎಂದು ಪಂಜಾಬ್‌ನ ಲಸಿಕಾ ನೋಡಲ್ ಅಧಿಕಾರಿ ವಿಕಾಸ್ ಗಾರ್ಗ್ ತಿಳಿಸಿದ್ದಾರೆ. (3ನೇ ಪುಟಕ್ಕೆ)

## ಹೆರಿಗೆ ನಂತರ ತಾಯಿ ಲಸಿಕೆ ಪಡೆಯಲು ಅಡ್ಡಿ ಇಲ್ಲ

ನವದೆಹಲಿ, ಮೇ 23 - ಮಗುವಿಗೆ ಜನ್ಮ ನೀಡಿದ ನಂತರ ತಾಯಿ ಯಾವ ಸಂದರ್ಭದಲ್ಲಿ ಬೇಕಾದರೂ ಕೊರೊನಾ ಲಸಿಕೆ ಪಡೆಯಬಹುದು ಎಂದು ಆರೋಗ್ಯ ಪರಿಣಿತರು ಹೇಳಿದ್ದಾರೆ.

ಹಾಲುಣಿಸುವ ತಾಯಂದಿರು ಲಸಿಕೆ ಪಡೆಯಬಹುದು ಎಂದು ಕೇಂದ್ರ ಸರ್ಕಾರ ಇತ್ತೀಚೆಗೆ ಅನುಮತಿ ನೀಡಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ನೀತಿ ಆಯೋಗದ ಸದಸ್ಯ ಡಾ. ವಿ. ಪೌಲ್, ಲಸಿಕೆ ಪಡೆದ ನಂತರ ತಾಯಂದಿರು ಹಾಲುಣಿಸು ವುದಕ್ಕೆ ಯಾವುದೇ ಅಡ್ಡಿ ಇಲ್ಲ. ಲಸಿಕೆ ಪಡೆದ ಗಂಟೆಯ ನಂತರವೂ (3ನೇ ಪುಟಕ್ಕೆ)

## ಹನ್ನೆರಡನೇ ತರಗತಿ ಪರೀಕ್ಷೆಗೆ ಬಹುತೇಕ ಒಮ್ಮತ

ನವದೆಹಲಿ, ಮೇ 23 - ಹನ್ನೆರಡನೇ ತರಗತಿ ಪರೀಕ್ಷೆ ನಡೆಸಲು ರಾಜ್ಯಗಳ ನಡುವೆ ವ್ಯಾಪಕ ಒಮ್ಮತವಿದೆ. ಈ ಬಗ್ಗೆ ಜೂನ್ 1ರಂದು ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ತಿಳಿಸಿದ್ದಾರೆ.

ಪರೀಕ್ಷೆ ಕುರಿತು ಭಾನುವಾರ ಕರೆಯಲಾಗಿದ್ದ ರಾಜ್ಯಗಳ ಸಭೆಯಲ್ಲಿ ಮಹಾರಾಷ್ಟ್ರ ಪರೀಕ್ಷೆ ವಿರೋಧಿಸಿದೆ. ದೆಹಲಿ ಹಾಗೂ ಕೇರಳ ರಾಜ್ಯಗಳು ಪರೀಕ್ಷೆಗೆ ಮುಂಚೆ ಲಸಿಕೆಗೆ ಒತ್ತಾಯಿಸಿವೆ.

ಜುಲೈ 15ರಿಂದ ಆಗಸ್ಟ್ 26ರ ನಡುವೆ ಪರೀಕ್ಷೆ ನಡೆಸಲು ಸಿ.ಬಿ.ಎಸ್.ಇ. ಪ್ರಸ್ತಾಪಿಸಿದೆ. 19 ಪ್ರಮುಖ ವಿಷಯಗಳ ಬಗ್ಗೆ ಸಾಮಾನ್ಯ ಪರೀಕ್ಷೆ ನಡೆಸಲು ಇಲ್ಲವೇ ವಿದ್ಯಾರ್ಥಿಗಳು ದಾಖಲಾಗಿರುವ ಶಾಲೆಗಳಲ್ಲೇ ಅಲ್ಪಾವಧಿಯ (3ನೇ ಪುಟಕ್ಕೆ)

# ಜಿಲ್ಲೆ ವಾರ ಪೂರ್ಣ ಲಾಕ್

## ಮೂರು ದಿನದ ಪೂರ್ಣ ಲಾಕ್ ಬೆನ್ನಲ್ಲೇ ಮತ್ತೊಂದು ವಾರ ಕಠಿಣ ನಿರ್ಬಂಧ ಮುಂದುವರಿಸಿದ ಜಿಲ್ಲಾಡಳಿತ

ದಾವಣಗೆರೆ, ಮೇ 23- ಜಿಲ್ಲೆಯಲ್ಲಿ ಜಾರಿಗೊಳಿಸಲಾಗಿದ್ದ ಸಂಪೂರ್ಣ ಲಾಕ್‌ಡೌನ್ ಅನ್ನು ಸೋಮವಾರ ಬೆಳಿಗ್ಗೆ 10 ಗಂಟೆಯಿಂದ ಮೇ 31ರ ಸೋಮವಾರ ಬೆಳಿಗ್ಗೆ 6 ಗಂಟೆವರೆಗೆ ಮುಂದುವರೆಸಲಾಗಿದೆ.


ಜಿಲ್ಲೆ ಸಂಪೂರ್ಣ ಲಾಕ್ ಡೌನ್ ಆಗಿದ್ದರ ಹಿನ್ನೆಲೆಯಲ್ಲಿ ದಾವಣಗೆರೆಯ ಕೆ.ಆರ್. ಮಾರ್ಕೆಟ್ ರಸ್ತೆ ಖಾಲಿಯಾಗಿದ್ದ ದೃಶ್ಯ.

ಜಿಲ್ಲೆಯ ತಾಲ್ಲೂಕು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕೋವಿಡ್ ಸೋಂಕು ವ್ಯಾಪಕವಾಗಿ ಹರಡುತ್ತಿದ್ದು, ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಕೆಲವು ನಿಬಂಧನೆಗಳಿಗೆ ಒಳಪಡಿಸಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಭಾನುವಾರ ಸಂಜೆ ಆದೇಶ ಹೊರಡಿಸಿದ್ದಾರೆ.

ಕಳೆದ ಶುಕ್ರವಾರ ಬೆಳಿಗ್ಗೆ 10 ಗಂಟೆಯಿಂದ ಮೇ 24ರ ಸೋಮವಾರ ಬೆಳಿಗ್ಗೆ 6 ಗಂಟೆಯವರೆಗೆ ಜಿಲ್ಲೆಯಾದ್ಯಂತ ಸಂಪೂರ್ಣ ಲಾಕ್‌ಡೌನ್ ಜಾರಿಗೊಳಿಸಲಾಗಿತ್ತು. ಇದೀಗ ಮತ್ತೆ ಒಂದು ವಾರಗಳ ಕಾಲ ಮುಂದೂಡಲಾಗಿದೆ. ಜನತೆಗೆ ದಿನಸಿ ಮತ್ತಿತರೆ ವಸ್ತುಗಳ ಖರೀದಿಗೆ ಸೋಮವಾರ ಬೆಳಿಗ್ಗೆ 6 ರಿಂದ 10ರವರೆಗೆ ಮಾತ್ರ ಕಾಲಾವಕಾಶ ನೀಡಿದಂತಾಗಿದೆ.

ಅವಕಾಶ ನೀಡಿರುವ ನಾಲ್ಕು ತಾಸುಗಳಲ್ಲಿ ವಸ್ತುಗಳನ್ನು ಮಾರಬೇಕೋ ಅಥವಾ ಕೊಂಡುಕೊಳ್ಳಬೇಕೋ ಎಂಬ ಜಿಜ್ಞಾಸೆ ಅಂಗಡಿಗಳ ಮಾಲೀಕರದ್ದಾದರೆ, ಮುಂದಿನ ವಾರಕ್ಕೆ ಬೇಕಾಗುವಷ್ಟು ವಸ್ತುಗಳನ್ನು ಕೊಂಡುಕೊಳ್ಳುವ ಉದ್ದೇಶ ಗ್ರಾಹಕರದ್ದಾಗಲಿದೆ. ಬೆಳಗಿನ ನಾಲ್ಕು ತಾಸು ಮಾರುಕಟ್ಟೆ, ದಿನಸಿ ಅಂಗಡಿ ಇರುವ ಪ್ರದೇಶಗಳು ಜಾತ್ರೆಯಂತಾಗುವ ಎಲ್ಲಾ ಲಕ್ಷಣಗಳೂ ಇವೆ ಎನ್ನಬಹುದು.

ರಾಜ್ಯಾದ್ಯಂತ ಸೋಂಕಿತರ ಸಂಖ್ಯೆ ಇಳಿಮುಖವಾಗುತ್ತಿದೆ. ಅಂಗಡಿ ಮುಂಗಟ್ಟುಗಳನ್ನು ತೆರೆಯಲು ರಾಜ್ಯ ಸರ್ಕಾರ ಬೆಳಿಗ್ಗೆ 6 ರಿಂದ 10ರವರೆಗೆ ಅನುಮತಿ ನೀಡಿದ್ದರೂ, ದಾವಣಗೆರೆ ಜಿಲ್ಲೆಯಲ್ಲಿ ಮಾತ್ರ ಈ ರೀತಿ ವಾರಗಟ್ಟಲೆ ಸಂಪೂರ್ಣ ಲಾಕ್ ಮಾಡಿರುವ ಹಠಾತ್ ನಿರ್ಧಾರ ಸಾರ್ವಜನಿಕರನ್ನು ಸಮಸ್ಯೆಗೆ ಗುರಿ ಮಾಡಲಿದೆ. ನೂತನ ಆದೇಶದನ್ವಯ, ಎಲ್ಲಾ ಅಂಗಡಿ ಮುಂಗಟ್ಟುಗಳು, ವಾಣಿಜ್ಯ-ಕೈಗಾರಿಕಾ ಚಟುವಟಿಕೆಗಳನ್ನು ನಿರ್ಬಂಧಿಸಲಾಗಿದೆ. ಸಾರ್ವಜನಿಕರು ಅಗತ್ಯ ಚಟುವಟಿಕೆಗಳಿಗೆ ವಾಹನಗಳಲ್ಲಿ ಸಂಚರಿಸುವುದನ್ನು ನಿರ್ಬಂಧಿಸಿ, ನಡೆದುಕೊಂಡು ಹೋಗಲು ಮಾತ್ರ ಅವಕಾಶ ನೀಡಲಾಗಿದೆ. ಯಾವುದೇ ವಾಹನ ಸಂಚಾರಕ್ಕೆ ಅವಕಾಶವಿರುವುದಿಲ್ಲ. ಮದುವೆ ಸಮಾರಂಭಕ್ಕೆ ಈಗಾಗಲೇ ನೀಡಲಾಗಿರುವ ಅನುಮತಿ ಪ್ರಕರಣಗಳಲ್ಲಿ ಕೇವಲ 10 ಜನರಿಗೆ ಮಾತ್ರ ಅವಕಾಶ ನೀಡಲಾಗಿದೆ. ಈ ಮದುವೆಗಳಲ್ಲಿ ಸಾರ್ವಜನಿಕರಿಗೆ ಊಟದ ವ್ಯವಸ್ಥೆಯನ್ನು ನಿರ್ಬಂಧಿಸಲಾಗಿದೆ. ಕಿರಾಣಿ ಅಂಗಡಿಗಳು, ದಿನಸಿ, ಹಣ್ಣು ತರಕಾರಿಗಳು, ಮಾಂಸ ಮತ್ತು ಮೀನು, ಹಾಗೂ ಹಣ್ಣು ಮತ್ತು ತರಕಾರಿ ಮಾರುಕಟ್ಟೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿರುತ್ತದೆ. ಎಲ್ಲಾ ರೀತಿಯ ಮದ್ಯದಂಗಡಿಗಳನ್ನು ಮತ್ತು ಬಾರ್‌ಗಳನ್ನು ಈ ಅವಧಿಯಲ್ಲಿ ನಿಷೇಧಿಸಲಾಗಿರುತ್ತದೆ. ಉಳಿದ ಎಲ್ಲಾ (3ನೇ ಪುಟಕ್ಕೆ)

### ಕೃಷಿ ಚಟುವಟಿಕೆಗಳಿಗೆ ಅನುಮತಿ

ಕೃಷಿ ಅವಲಂಬಿತ ಕೈಗಾರಿಕೆಗಳು ಕಾರ್ಯನಿರ್ವಹಿಸಲು ಅನುಮತಿಸಿದೆ ಹಾಗೂ ಕೃಷಿ ಉಪಕರಣ ಬಾಡಿಗೆ ಕೇಂದ್ರಗಳಿಗೆ, ಯಂತ್ರೋಪಕರಣಗಳಿಗೆ ಸಂಬಂಧಿಸಿದ ಅಂಗಡಿಗಳು ಮತ್ತು ಗೋದಾಮುಗಳು ಸೇರಿದಂತೆ ಎಲ್ಲಾ ಕೃಷಿ ಮತ್ತು ತತ್ಸಂಬಂಧಿತ ಅಂಗಡಿಗಳು ಮತ್ತು ಗೋದಾಮುಗಳು ಸೇರಿದಂತೆ ಎಲ್ಲಾ ಕೃಷಿ ಮತ್ತು ತತ್ಸಂಬಂಧಿತ ಕಾರ್ಯಚಟುವಟಿಕೆಗಳಿಗೆ ಹಾಗೂ ಸಿಬ್ಬಂದಿಗಳು ಕೃಷಿ ಕೈಗಾರಿಕಾ ಸಂಸ್ಥೆಗಳು ನೀಡಿದ ಅರ್ಹ ಗುರುತಿನ ಚೀಟಿ, ಅಧಿಕೃತ ಪತ್ರವನ್ನು ತೋರಿಸುವ ಮೂಲಕ ಓಡಾಡುವುದಕ್ಕೆ ಅನುಮತಿ ನೀಡಲಾಗಿದೆ. ಕೃಷಿ ಚಟುವಟಿಕೆಗಳಿಗೆ ಅನುವಾಗುವಂತೆ ಅಗತ್ಯ ವಸ್ತುಗಳಾದ ಬೀಜ, ಗೊಬ್ಬರ, ಕೀಟ ನಾಶಕಗಳು, ಕೃಷಿ ಕೋಯ್ಲು ಯಂತ್ರೋಪಕರಣಗಳ ಸಾಗಣೆ ಮತ್ತು ಸಂಬಂಧಿಸಿದ ಅಂಗಡಿ ಮತ್ತು ಗೋದಾಮುಗಳಲ್ಲಿ ಇಳಿಸಲು ಮತ್ತು ಪ್ರತಿ ದಿನ ಬೆಳಿಗ್ಗೆ 6 ಗಂಟೆಯಿಂದ 10ರ ವರೆಗೆ ವ್ಯಾಪಾರ ವಹಿವಾಟು ನಡೆಸಲು ಅನುಮತಿ ನೀಡಲಾಗಿದೆ.



### ವಾರದ ಕಂತಿಗಾಗಿ ಒತ್ತಾಯಿಸುವಂತಿಲ್ಲ

ದಾವಣಗೆರೆ, ಮೇ 23- ಲಾಕ್ ಡೌನ್ ಸಂದರ್ಭದಲ್ಲಿ ಸಣ್ಣ ಸಣ್ಣ ಕೆಲಸ ಮಾಡುವವರು ಸ್ವ ಸಹಾಯ ಸಂಘಗಳಲ್ಲಿ ಸಾಲ ಪಡೆದಿರುವವರು ಸಂಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಇವರುಗಳಿಗೆ ಸಾಲ ನೀಡಿರುವ ಮೈಕ್ರೋಫೈನಾನ್ಸ್ ಸಂಸ್ಥೆಗಳಾದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ, ಉಜ್ಜೀವನ್ ಫೈನಾನ್ಸ್ ನಂತಹ ಅನೇಕ ಸಂಸ್ಥೆಗಳು ವಾರದ ಕಂತುಗಳನ್ನು ಕಟ್ಟಲು ಒತ್ತಾಯಿಸಬಾರದು ಎಂದು ಜಿಲ್ಲಾಡಳಿತ ಆದೇಶಿಸಿದೆ.

ಆದೇಶದ ಹೊರತಾಗಿಯೂ ಒಂದು ವೇಳೆ ಸಣ್ಣ ಪುಟ್ಟ ವ್ಯಾಪಾರ ಮಾಡುವವರನ್ನು ಕಂತುಗಳನ್ನು ಕಟ್ಟಲು ಒತ್ತಾಯಿಸುವಂತಹ ದೂರುಗಳು ಜಿಲ್ಲಾಡಳಿತಕ್ಕೆ ಬಂದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ

## ಸಂಕಷ್ಟದಲ್ಲಿ ಆಹಾರ ನೀಡುವ ಕೆಚ್ಚೆದೆಯ ಕನ್ನಡಿಗರ ಪಡೆ

### ಸಾಮಾಜಿಕ ಜಾಲ ತಾಣಗಳನ್ನು ಸದ್ಬಳಕೆ ಮಾಡಿಕೊಂಡು ಮಾದರಿಯಾದ ಯುವಕರು

ದಾವಣಗೆರೆ, ಮೇ 23- ಕೊರೊನಾ ಸೋಂಕು ಹೆಚ್ಚಾಗುತ್ತಿರುವ ಪ್ರಸ್ತುತ ದಿನಗಳಲ್ಲಿ ಸಾಮಾಜಿಕ ಜಾಲ ತಾಣಗಳಲ್ಲಿ ಬರುವ ಸುದ್ದಿ, ವೀಡಿಯೋಗಳನ್ನು ನೋಡಿ ಹತ್ತಾರು ಜನರಿಗೆ ಫಾರ್ವರ್ಡ್ ಮಾಡಿ ಕುಳಿತುಕೊಳ್ಳುವ ಜನರೇ ಹೆಚ್ಚು.

ಆದರೆ ಅದೇ ಸಾಮಾಜಿಕ ಜಾಲ ತಾಣಗಳ ಮೂಲಕವೇ ಹಣ ಸಂಗ್ರಹಿಸಿ, ಸಂಕಷ್ಟದಲ್ಲಿರುವವರಿಗೆ ಸದ್ದಿಲ್ಲದೆ ಆಹಾರ, ನೀರು ನೀಡುವ ಮೂಲಕ ನೆರವಿನ ಹಸ್ತ ಚಾಚುತ್ತಿದೆ ದಾವಣಗೆರೆಯ ಕೆಚ್ಚೆದೆಯ ಕನ್ನಡಿಗರ ಪಡೆ

ಹೌದು, ಸದ್ಯದ ಸಂದರ್ಭದಲ್ಲಿ ಹೊತ್ತಿನ ಊಟಕ್ಕೂ ಪರಿತಪಿಸುವ ಸಂದರ್ಭ ಎದುರಾಗಿದೆ. ಹೋಟೆಲ್‌ಗಳು ಬಂದ್ ಆಗಿರುವುದರಿಂದ ಹೊರ ಊರುಗಳಿಂದ ನಗರ ಪ್ರವೇಶಿಸಿ ತೆರಳುವ ಲಾರಿ ಚಾಲಕರು, ಕ್ಲೀನರ್‌ಗಳು, ನಗರದಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸರು, ಪೌರ ಕಾರ್ಮಿಕರು, ನಿರ್ಗತಿಕರು ಹೀಗೆ ಹಲವಾರು ವರ್ಗದ ಜನತೆ ನೀರು ಹಾಗೂ ಊಟಕ್ಕೆ ಪರದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಅದಕ್ಕಾಗಿಯೇ ಕನ್ನಡಿಗರ ಪಡೆಯ ಹದಿನೈದಕ್ಕೂ ಹೆಚ್ಚು ಸದಸ್ಯರು ದಿನ ಬಿಟ್ಟು ದಿನ ನಗರದ ವಿವಿಧ ಪ್ರದೇಶಗಳಲ್ಲಿ 400ಕ್ಕೂ ಹೆಚ್ಚು ಆಹಾರದ ಪೊಟ್ಟಣಗಳನ್ನು ಹಾಗೂ ನೀರಿನ ಬಾಟಲ್‌ಗಳನ್ನು ವಿತರಿಸುವ ಮೂಲಕ ಮಾನವೀಯತೆ ಮೆರೆಯುತ್ತಿದ್ದಾರೆ. ಅಷ್ಟೇ ಅಲ್ಲ, ಯುವ ಜನಾಂಗಕ್ಕೆ ಮಾದರಿಯಾಗಿದ್ದಾರೆ ಸಹ.

ಪಿಯುಸಿ, ಎಂಜಿನಿಯರಿಂಗ್ ವಿದ್ಯಾರ್ಥಿಗಳು, ವೈದ್ಯ ವಿದ್ಯಾರ್ಥಿಗಳನ್ನೊಳಗೊಂಡ ಈ 'ಪಡೆ'ಗೆ ತಂಡದ ಸದಸ್ಯರ ಸ್ನೇಹಿತರು, ಕುಟುಂಬ ವರ್ಗವೂ ಸಹಕಾರ ನೀಡುತ್ತಿದೆ.

**1.25 ಲಕ್ಷ ರೂ. ಸಂಗ್ರಹ:** ನಾವು ಯಾರ ಬಳಿಯೂ ಹಣ ಯಾಚಿಸಿಲ್ಲ. ಕೇವಲ ಸಾಮಾಜಿಕ ಜಾಲ ತಾಣಗಳ ಮೂಲಕ ನಾವು ಮಾಡಲುದ್ದೇಶಿಸಿದ ಕಾರ್ಯ ತಿಳಿದೇ ಸ್ನೇಹಿತರು, ಸಂಬಂಧಿಗಳು ಹಣ ನೀಡಿದ್ದಾರೆ. ಇಲ್ಲಿವರೆಗೆ 1.25 ಲಕ್ಷ ರೂ. ಹಣ ಸಂಗ್ರಹವಾಗಿದೆ. ಈ ಹಣದಿಂದಲೇ ನಾವು ಆಹಾರ, ನೀರು ನೀಡುತ್ತಿದ್ದೇವೆ ಎನ್ನುತ್ತಾರೆ ಕೆಚ್ಚೆದೆಯ ಕನ್ನಡಿಗರ ಪಡೆಯ ಎ.ಎಂ.ವಿ. ಒಡೆಯರ್.

ಬಸವ ಜಯಂತಿಯಂದು ಈ ಸೇವಾ ಕಾರ್ಯ ಆರಂಭಿಸಿದೆವು. ನಗರದ ಸಿದ್ದವೀರಪ್ಪ ಬಡಾವಣೆಯಲ್ಲಿನ ನಮ್ಮ ಮನೆಯಾದ ಶರಣಧಾಮದಲ್ಲಿ ಆಹಾರ ತಯಾರಾಗುತ್ತದೆ. ಆಟೋ ಚಾಲಕರೂ ಆದ ವೀರೇಶ್ ಎಂಬುವವರು ಪ್ರತಿ ದಿನ ಆಹಾರ ತಯಾರಿಸಿ ಕೊಡುತ್ತಿದ್ದಾರೆ. ಬೆಳಿಗ್ಗೆ 7 ಗಂಟೆ ಸುಮಾರಿಗೆ ಸುಮಾರು 40ಕೆ.ಜಿ.ಯಷ್ಟು ಅಕ್ಕಿ ಬೇಯಿಸಿ ಚಿತ್ರಾನ್ನ, ಪಲಾವ್, ಕ್ಯಾಪ್ಸಿಕಮ್ ರೈಸ್ ಹೀಗೆ ವಿವಿಧ ರೀತಿಯ ಪ್ರತಿ ದಿನ ಒಂದೊಂದು ಬಗೆಯ ಅಡುಗೆ ತಯಾರಿಸಿ 10.30ರ ವೇಳೆಗೆ ಪೊಟ್ಟಣಗಳನ್ನು ಮಾಡುತ್ತೇವೆ. ನಂತರ ವಿತರಣೆಗೆ ಮುಂದಾಗುತ್ತೇವೆ. ನಮ್ಮ ಈ ಕಾರ್ಯಕ್ಕೆ ಹಲವೆಡೆ ಪ್ರಶಂಸೆ ವ್ಯಕ್ತವಾಗುತ್ತಿದೆ. ಇದು ನಮ್ಮನ್ನು ಮತ್ತಷ್ಟು ಹುರಿದುಂಬಿಸುತ್ತಿದೆ ಎನ್ನುವುದು ಒಡೆಯರ್ ಮಾತು.

ಡಾ.ಎ.ಎಂ. ಕೃಪಾನಿಧಿ, ಡಾ.ಎಸ್.ಎಂ. ವಿನುತ, ಸಪ್ಪಿ ಒಡೆಯರ್, ಬಿ.ಎಂ. ಅಭಿಷೇಕ್, ಆರ್.ಸುಜಯ್ ರಾಜ್, ರೋಹನ್, ಸಾಗರ್, ಯಶವಂತ್ ಶಾಮನೂರು, ವಚನ್ ಹೊಸಮಠ್, ವಿನೀತ್ ಶರಣ್, ಕೆ.ಜಿ. ಪೃಥ್ವಿ, ಶರತ್ ಒಡೆಯರ್, ಬಿ.ಎಂ. ಅಕ್ಷಯ್, ದರ್ಶನ್ ಶಾಮನೂರು, ಅಜಯ್, ಯು.ಪಿ. ವಿನಯ್ ಈ 'ಪಡೆ'ಯಲ್ಲಿದ್ದಾರೆ.

### 100 ಸಸಿ ನೆಡುವ ಚಿಂತನೆ

'ನಾವು ಬದುಕೋಣ, ನಮ್ಮವರನ್ನೂ ಬದುಕಿಸೋಣ' ಎಂಬ ಧ್ಯೇಯದಂತೆ ನಾವು ಆಹಾರ ವಿತರಿಸುವಲ್ಲಿ ಕಾರ್ಯೋನ್ಮುಖರಾಗಿದ್ದೇವೆ. ಮುಂದಿನ ದಿನಗಳಲ್ಲಿ ವೃದ್ಧಾಶ್ರಮ, ಅನಾಥಾಶ್ರಮ, ಅಂಗವಿಕಲರು, ಬುದ್ದಿಮಾಂದ್ಯರಿಗೆ, ಅಂದಾಶ್ರಮಗಳಿಗೆ ಕೈಲಾದ ಸೇವೆ ಮಾಡುವ ಉದ್ದೇಶವಿದೆ.

ಕೋವಿಡ್ ಸೋಂಕು ಹೆಚ್ಚಾಗಿರುವ ಪ್ರಸ್ತುತ ದಿನಗಳಲ್ಲಿ ಎಲ್ಲರಿಗೂ ಆಕ್ಸಿಜನ್ ಮಹತ್ವದ ಅರಿವಾಗುತ್ತಿದೆ. ಈ ನಿಟ್ಟನಲ್ಲಿ ಕೆಚ್ಚೆದೆಯ ಕನ್ನಡಿಗರ ಪಡೆಯಿಂದ ನಗರದಲ್ಲಿ ಸುಮಾರು 100 ಸಸಿಗಳನ್ನು ನೆಡುವ ಚಿಂತನೆ ಇದೆ ಎಂದು ಎ.ಎಂ.ವಿ. ಒಡೆಯರ್ ಹೇಳಿದರು.

ಎಲ್ಲಿ ಸಸಿಗಳನ್ನು ನೆಡಬೇಕೆಂಬ ಬಗ್ಗೆ ಮಹಾನಗರ ಪಾಲಿಕೆಯ ಮೇಯರ್ ಹಾಗೂ ಸ್ಮಾರ್ಟ್ ಸಿಟಿ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು. ಪಾಲಿಕೆ ಅವಕಾಶ ನೀಡಿದಲ್ಲಿ ಪ್ರಸ್ತುತ ಆಹಾರ ವಿತರಣಾ ಕಾರ್ಯದ ನಡುವೆಯೇ ಸರ್ಕಾರದ ಮಾರ್ಗಸೂಚಿ ಅನುಸರಿಸುತ್ತಾ ಸಸಿ ನೆಡುವ ಕಾರ್ಯಕ್ಕೂ ಮುಂದಾಗುತ್ತೇವೆ ಎಂದರು.





## ಮೆಡಿಕಲ್ ಕಾಲೇಜ್, ಜಿಲ್ಲಾಸ್ಪತ್ರೆಗಳಲ್ಲಿ ಬ್ಲಾಕ್ ಫಂಗಸ್‌ಗೆ ಸೂಕ್ತ ಚಿಕಿತ್ಸೆ

ಬೆಂಗಳೂರು, ಮೇ 23 - ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಹಾಗೂ ಜಿಲ್ಲಾ ಆಸ್ಪತ್ರೆಗಳು ಬ್ಲಾಕ್ ಫಂಗಸ್‌ಗೆ ಸೂಕ್ತ ಚಿಕಿತ್ಸೆ ನೀಡಲು ರಾಜ್ಯ ಸರ್ಕಾರ ಅನುಮತಿ ನೀಡಿದೆ.

ಮುಂದಿನ ದಿನಗಳಲ್ಲಿ ಸೂಕ್ತ ಸೌಲಭ್ಯ ಹೊಂದಿರುವ ತಾಲ್ಲೂಕು ಆಸ್ಪತ್ರೆಗಳೂ ಸಹ ಚಿಕಿತ್ಸೆ ಕೊಡುವಂತಾಗಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿದೆ.

ರಾಜ್ಯದಲ್ಲಿ ಕಳೆದ ವಾರ 700ರಷ್ಟು ಬ್ಲಾಕ್ ಫಂಗಸ್ ಸೋಂಕುಗಳು ಕಂಡು ಬಂದಿವೆ. ಆಕ್ಸಿಜನ್ ಪೂರೈಕೆ, ಪೈಪ್ ಅಳವಡಿಕೆಯ ಗುಣಮಟ್ಟ ಹಾಗೂ ಸಿಲಿಂಡರ್ ಕುರಿತು ಅನುಮಾನ ವ್ಯಕ್ತವಾಗುತ್ತಿರುವುದರಿಂದ ಸೋಂಕಿಗೆ ಕಾರಣ ಪತ್ತೆ ಮಾಡುವಂತೆ ಪರಿಣಿತರಿಗೆ ನಿರ್ದೇಶನ ನೀಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಸಿ.ಎನ್. ಅಶ್ವತ್ಥ ನಾರಾಯಣ ಹೇಳಿದ್ದಾರೆ.

ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವಿದ್ ಅಖ್ತರ್ ಅವರು ಆದೇಶವೊಂದನ್ನು ಹೊರಡಿಸಿದ್ದು, ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಹಾಗೂ ಜಿಲ್ಲಾ ಆಸ್ಪತ್ರೆಗಳು ಬ್ಲಾಕ್ ಫಂಗಸ್ ರೀತಿಯ ಪ್ರಕರಣಗಳಿಗೆ ಚಿಕಿತ್ಸೆ ನೀಡಲು ಅನುಮತಿ ನೀಡಿದೆ. ರಾಜ್ಯದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಈ ಪ್ರಕರಣಗಳು ಕಂಡು ಬರುತ್ತಿವೆ.


ಈ ಹಿಂದೆ ಸರ್ಕಾರ ಬ್ಲಾಕ್ ಫಂಗಸ್ ಸೋಂಕಿತರು ಚಿಕಿತ್ಸೆ ಪಡೆಯಲು ಕೆಲವೇ (3ನೇ ಪುಟಕ್ಕೆ)

**ರಾಜ್ಯದಲ್ಲಿ ವಾರದಲ್ಲೇ 700ಕ್ಕೂ ಹೆಚ್ಚು ಸೋಂಕು. ಆಕ್ಸಿಜನ್, ಪೈಪ್ ಕಲಬೆರಕೆಯೇ ಸೋಂಕಿನ ಮೂಲವಾಗಿರುವ ಶಂಕೆ.**

## ವೈಯಕ್ತಿಕ ನಿಂದನೆಗಳಿಗೆ ಸಕಾಲವಲ್ಲ

### ಜಿಲ್ಲೆಯ ನಾಯಕರಿಬ್ಬರು ಜನಸೇವೆಗೆ ಮುಂದಾಗಲಿ: ಕಲ್ಲೇರುದ್ರೇಶ್

ದಾವಣಗೆರೆ, ಮೇ 23- ಜಿಲ್ಲೆಯಲ್ಲಿ ಕೊರೊನಾ ಉಲ್ಬಣದ ಸಮಯದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ ಮತ್ತು ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಇಬ್ಬರೂ ಒಬ್ಬರಿಗೊಬ್ಬರು ಆರೋಪ-ಪ್ರತ್ಯಾರೋಪ ಮಾಡುವುದಕ್ಕೆ ಇದು ಸುಸಂದರ್ಭವಲ್ಲ. ಮೂರನೇ ವ್ಯಕ್ತಿಗೆ ಅವಕಾಶ ಕೊಡದೇ ಜನಸೇವೆಗೆ ಮುಂದಾಗಬೇಕು ಎಂದು ಜೆಡಿಎಸ್ ಮುಖಂಡ ಕಲ್ಲೇರುದ್ರೇಶ್ ತಿಳಿಸಿದರು.



ಜಿಲ್ಲೆಯಲ್ಲಿ, ಅದರಲ್ಲೂ ಗ್ರಾಮೀಣ ಭಾಗದಲ್ಲಿ ಕೋವಿಡ್ ಹೆಚ್ಚಾಗಿ ಹರಡಿ ಉಲ್ಬಣಗೊಳುತ್ತಿದೆ. ಬ್ಲ್ಯಾಕ್ ಮತ್ತು ವೈಟ್ ಫಂಗಸ್‌ನಂತಹ ರೋಗಗಳು ಬಾಧಿಸತೊಡಗಿವೆ. ಇವುಗಳೆಲ್ಲದರ ನಡುವೆ ಮೂರನೇ ಅಲೆಯ ವಿಚಾರವೂ ಆತಂಕ ಉಂಟು ಮಾಡಿದೆ. ಹೀಗಿರುವಾಗ ಈ ಇಬ್ಬರೂ ನಾಯಕರು ಪರಸ್ಪರ ಒಬ್ಬರಿಗೊಬ್ಬರು ಆರೋಪ ಮಾಡಿಕೊಳ್ಳುತ್ತಿರುವುದು ಜಿಲ್ಲೆಗೆ ಶ್ರೇಯಸ್ಕರವಲ್ಲ. ಜಿಲ್ಲಾ ಮಟ್ಟದ ಅಧಿಕಾರಿಗಳಲ್ಲಿ ಕೋವಿಡ್ ನಿರ್ವಹಣೆ ವಿಚಾರದಲ್ಲಿ ಸೋಮಾರಿತನ, ಜಿಗುಪ್ಸೆ ಹೆಚ್ಚಾಗಲು ಕಾರಣವಾಗುತ್ತದೆ. ಇದರಿಂದ ಕೊರೊನಾ ಅಲೆಯನ್ನು ಸಮರ್ಥವಾಗಿ ನಿಭಾಯಿಸಲು ಅಸಾಧ್ಯ ಎಂದು ಪತ್ರಿಕಾಗೋಷ್ಠಿಯಲ್ಲಿ ಕಿವಿಮಾತು ಹೇಳಿದರು.

ಈ ಇಬ್ಬರು ನಾಯಕರು ತಮ್ಮ ಹಿಂಬಾಲಕರ ವೈಯಕ್ತಿಕ ಅಭಿಪ್ರಾಯಗಳಿಂದ ಕಿವಿ ಕಚ್ಚುವಿಕೆಗೆ ಮನ್ನಣೆ ಕೊಟ್ಟರೆ ಅದು ಜಿಲ್ಲೆಯ ಜನರಿಗೆ (2ನೇ ಪುಟಕ್ಕೆ)

# ಬ್ಲಾಕ್ ಫಂಗಸ್‌ಗೆ ಸೂಕ್ತ ಚಿಕಿತ್ಸೆ

**(1ನೇ ಪುಟದಿಂದ)** ಆಸ್ಪತ್ರೆಗಳನ್ನು ನಿಯೋಜಿಸಿತ್ತು.

ಬ್ಲಾಕ್ ಫಂಗಸ್ ಪ್ರಕರಣಗಳು ರಾಜ್ಯದಲ್ಲಿ ವೇಗವಾಗಿ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಸೋಂಕಿನ ಮೂಲ ಹುಡುಕಲು ಕೊವಿಡ್ ಕಾರ್ಯಪಡೆಗೆ ತಿಳಿಸಲಾಗಿದೆ.

ವರ್ಷದ ಹಿಂದೆ ದೇಶದಲ್ಲಿ 100 ಬ್ಲಾಕ್ ಫಂಗಸ್ ಪ್ರಕರಣಗಳು ಪತ್ತೆಯಾಗಿದ್ದವು. ಈಗ ಕಳೆದ ಒಂದು ವಾರದಲ್ಲೇ ರಾಜ್ಯದಲ್ಲಿ 700ಕ್ಕೂ ಹೆಚ್ಚು ಪ್ರಕರಣಗಳು ಪತ್ತೆಯಾಗಿವೆ. ಸೋಂಕು ಹೆಚ್ಚಾಗುತ್ತಿರುವುದು ಕಳವಳಕ್ಕೆ ಕಾರಣವಾಗಿದೆ ಎಂದು ಉಪ ಮುಕ್ಯಮಂತ್ರಿ ಹೇಳಿದ್ದಾರೆ.

ಕೊರೊನಾ ಹರಡಿರುವ ಬೇರೆ ರಾಜ್ಯಗಳಲ್ಲಿ ಬ್ಲಾಕ್ ಫಂಗಸ್ ಪತ್ತೆಯಾಗುತ್ತಿಲ್ಲ. ಕೇವಲ ಭಾರತದಲ್ಲಿ ಮಾತ್ರ ಪ್ರಕರಣಗಳು ಪತ್ತೆಯಾಗುತ್ತಿರುವುದು ಚಿಂತೆಗೆ ಕಾರಣವಾಗಿದೆ. ಹೀಗಾಗಿ ಸೋಂಕಿನ ಮೂಲವನ್ನು ಹುಡುಕಬೇಕಿದೆ ಎಂದು ಅಶ್ವತ್ಥನಾರಾಯಣ್ ಹೇಳಿದ್ದಾರೆ.

ಕೊವಿಡ್ ಕಾರ್ಯಪಡೆ ಸಭೆಯಲ್ಲಿ ಮಾತನಾಡಿದ ಬೆಂಗಳೂರಿನ ಮಣಿಪಾಲ ಆಸ್ಪತ್ರೆಯ ಶಸ್ತ್ರಚಿಕಿತ್ಸಕ ಡಾ. ಸಂಪತ್ ಚಂದ್ರ ಪ್ರಸಾದ ರಾವ್, ಐ.ಸಿ.ಯು.ಗಳಲ್ಲಿ ಕಡಿಮೆ ಗುಣಮಟ್ಟದ ಸಿಲಿಂಡರ್ ಇಲ್ಲವೇ ಕಡಿಮೆ ಗುಣಮಟ್ಟದ ಪೈಪಿಂಗ್ ವ್ಯವಸ್ಥೆ ಕಾರಣದಿಂದಾಗಿ ರೋಗ ಬರುತ್ತಿರಬಹುದು ಎಂದು ಹೇಳಿದ್ದಾರೆ.

ಆಕ್ಸಿಜನ್ ಪೂರೈಕೆಯಾಗುವ ಕೈಗಾರಿಕಾ ಹಂತದಲ್ಲೇ ಕಲಬೆರಕೆ ಆಗಿರಬಹುದು ಇಲ್ಲವೇ ಕಡಿಮೆ ಗುಣಮಟ್ಟದ ಸಂಸ್ಕರಣೆಯಿಂದಲೂ ಸಮಸ್ಯೆ ಆಗಿರಬಹುದು ಎಂದು ರಾವ್ ಹೇಳಿದ್ದಾರೆ.

ವೆಂಟಿಲೇಟರ್‌ಗಳಲ್ಲಿ ಸಾಮಾನ್ಯ ನಲ್ಲಿ ನೀರನ್ನು ಬಳಸುತ್ತಿರುವುದರಿಂದ ಸಮಸ್ಯೆಯಾಗಿರುವ ಶಂಕೆಯೂ ಇದೆ. ಹೆಚ್ಚಾಗುತ್ತಿರುವ ಬೇಡಿಕೆಯ ಹಿನ್ನೆಲೆಯಲ್ಲಿ ಕೈಗಾರಿಕಾ ಆಕ್ಸಿಜನ್ ಅನ್ನು ದೊಡ್ಡ ಪ್ರಮಾಣದಲ್ಲಿ ಬಳಸಲಾಗುತ್ತಿದೆ. ಆದರೆ, ಈ ಆಕ್ಸಿಜನ್ ವೈದ್ಯಕೀಯ ಮಟ್ಟದ ಗುಣಮಟ್ಟದಲ್ಲಿದೆಯೇ ಎಂಬ ಪ್ರಶ್ನೆ ಇದೆ. ಇದೂ ಸಹ ಬ್ಲಾಕ್ ಫಂಗಸ್‌ಗೆ ಕಾರಣಗಳಲ್ಲೊಂದಾಗಿರಬಹುದು ಎಂದವರು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಮೈಕ್ರೋಬಯಾಲಜಿಸ್ಟ್‌ಗಳು ಪರಿಶೀಲನೆ ನಡೆಸಬೇಕು. ಇದರ ಜೊತೆಗೆ ಆಸ್ಪತ್ರೆಗೆ ಪೂರೈಕೆಯಾಗುವ ಆಕ್ಸಿಜನ್ ಮೂಲ, ಪೈಪುಗಳ ಗುಣಮಟ್ಟ ಹಾಗೂ ಸಿಲಿಂಡರ್ ಗುಣಮಟ್ಟ, ವೆಂಟಿಲೇಟರ್‌ಗಳಲ್ಲಿ ಬಳಸುವ ನೀರಿನ ಗುಣಮಟ್ಟವನ್ನು ಪರಿಶೀಲಿಸುವಂತೆಯೂ ಉಪ ಮುಖ್ಯಮಂತ್ರಿ ಅಶ್ವತ್ಥನಾರಾಯಣ ಹೇಳಿದ್ದಾರೆ.

## ಜಿಲ್ಲೆ ವಾರ ಪೂರ್ಣ ಲಾಕ್

**(1ನೇ ಪುಟದಿಂದ)** ಸಾಮಾಜಿಕ, ಧಾರ್ಮಿಕ ಸಭೆ ಸಮಾರಂಭಗಳನ್ನು ನಿರ್ಬಂಧಿಸಲಾಗಿದೆ. ಶವ ಸಂಸ್ಕಾರಗಳಲ್ಲಿ ಗರಿಷ್ಠ 5 ಜನರಿಗೆ ಮಾತ್ರ ಭಾಗವಹಿಸಲು ಅನುಮತಿಸಿದೆ. ದಾವಣಗೆರೆ ಜಿಲ್ಲೆಗೆ ಆಗಮಿಸುವವರನ್ನು ಪ್ರತೀ ಚೆಕ್ ಪೋಸ್ಟ್‌ಗಳಲ್ಲಿ ವಿಚಾರಣೆ ನಡೆಸಿ, ದಾವಣಗೆರೆ ಜಿಲ್ಲೆಯಲ್ಲಿ ವಾಸ್ತವ್ಯ ಹೂಡುವುದಾದಲ್ಲಿ ಎಲ್ಲಿ ತಂಗುತ್ತಾರೆ ಎಂಬ ಬಗ್ಗೆ ಪೂರ್ಣ ವಿಳಾಸ, ಮೊಬೈಲ್ ಸಂಖ್ಯೆನ್ನು ಪಡೆದುಕೊಳ್ಳಲಾಗುವುದು ಹಾಗೂ ಹೊರ ಜಿಲ್ಲೆಯಿಂದ ಆಗಮಿಸುವವರು ಕಡ್ಡಾಯವಾಗಿ 14 ದಿನಗಳ ಕಾಲ ಹೋಂ ಕ್ವಾರಂಟೈನ್‌ನಲ್ಲಿ ಇರಬೇಕು. ವಾಹನ ಬಳಕೆಯನ್ನು ತುರ್ತು ವೈದ್ಯಕೀಯ ಸೇವೆಗಳಿಗೆ ಮಾತ್ರ ಬಳಸಬಹುದು,

ಕ್ಲಿನಿಕ್, ಆಸ್ಪತ್ರೆ, ಲಸಿಕೆ ಹಾಗೂ ಪರೀಕ್ಷೆ ಉದ್ದೇಶಗಳಿಗೆ ಕನಿಷ್ಟ ವೈದ್ಯಕೀಯ ದಾಖಲೆಗಳು, ವೈದ್ಯ ಸಲಹಾ ಚೀಟಿ, ಆಸ್ಪತ್ರೆಯಲ್ಲಿ ದಾಖಲಾದ ವಿವರಗಳ ರುಜುವಾತಿನೊಂದಿಗೆ ಸಂಚರಿಸಲು ಅನುಮತಿಸಲಾಗಿದೆ. ಹೋಟೆಲ್, ರೆಸ್ಟೋರೆಂಟ್‌ಗಳು, ಉಪಹಾರ ಗೃಹಗಳು ಪಾರ್ಸಲ್ ಸೇವೆಗಳನ್ನು ಗ್ರಾಹಕರ ಮನೆ ಬಾಗಿಲಿಗೆ ವಿತರಿಸಲು ಮಾತ್ರ ಅನುಮತಿ ಇದೆ. ಯಾವುದೇ ರೀತಿಯ ಪಾರ್ಸಲ್ ಗಳನ್ನು ಗ್ರಾಹಕರು ನೇರವಾಗಿ ಖರೀದಿಸಲು ಅವಕಾಶವಿರುವುದಿಲ್ಲ.

ಹಾಲು, ಡೈರಿ ಹಾಗೂ ಹಾಲಿನ ಬೂತ್‌ಗಳು ಮತ್ತು ಮೊಟ್ಟೆ ಅಂಗಡಿಗಳು ಮಾತ್ರ ಪ್ರತಿದಿನ ಬೆಳಿಗ್ಗೆ 6 ರಿಂದ 10.00 ಗಂಟೆಯವರೆಗೆ ತೆರೆಯಲು ಅನುಮತಿಸಲಾಗಿದೆ. ಇಂದಿರಾ ಕ್ಯಾಂಟೀನ್ ತೆರೆಯಲು ಅನುಮತಿಸಲಾಗಿದೆ ವಿಶೇಷವಾಗಿ ಆಮ್ಲಜನಕ ತರುವ ವಾಹನಗಳನ್ನು ತಡೆರಹಿತ ಸಾಗಾಟವನ್ನು ಅನುಮತಿಸಲಾಗಿದೆ.

ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಹಾಪ್-ಕಾಮ್ಸ್ ಮೂಲಕ ಮಾತ್ರ ಸಾರ್ವಜನಿಕರಿಗೆ ತರಕಾರಿಗಳನ್ನು ಹಾಗೂ ಹಣ್ಣುಗಳನ್ನು ಸಾರ್ವಜನಿಕರ ಮನೆ ಬಾಗಿಲಿಗೆ ಮಾರಾಟ ಮಾಡಲು ಅನುಮತಿ ನೀಡಲಾಗಿದೆ. ಹಾಪ್-ಕಾಮ್ಸ್ ಲಭ್ಯವಿಲ್ಲದಿರುವ ಪ್ರದೇಶಗಳಲ್ಲಿ ಆಯುಕ್ತರು, ಮಹಾನಗರಪಾಲಿಕೆ ಮತ್ತು ಸಂಬಂಧಪಟ್ಟ ತಹಶೀಲ್ದಾರರು ಸ್ಥಳೀಯವಾಗಿ ಸೀಮಿತ ಸಂಖ್ಯೆಯಲ್ಲಿ ತಳ್ಳುವ ಗಾಡಿಯ ಮೂಲಕ ಮನೆ ಬಾಗಿಲಿಗೆ ತರಕಾರಿಗಳನ್ನು ಹಾಗೂ ಹಣ್ಣುಗಳನ್ನು ಮಾರಾಟ ಮಾಡಲು ಅನುಮತಿ ಕಲ್ಪಿಸಲಾಗಿದೆ.

# ಜಿಲ್ಲೆ ಪೂರ್ಣ ಲಾಕ್: ನಗರ ಸ್ತಬ್ಧ



### ವಾಹನಗಳ ಓಡಾಟ ವಿರಳ

ದಾವಣಗೆರೆ, ಮೇ 23- ಜಿಲ್ಲೆಯಲ್ಲಿ ದಿನೇ ದಿನೇ ಕೊರೊನಾ ಉಲ್ಬಣವಾಗುತ್ತಿರುವ ಹಿನ್ನೆಲೆಯಲ್ಲಿ ಸೋಂಕಿನ ಕೊಂಡಿ ಕಳಚುವ ದೃಷ್ಟಿಯಿಂದ ಜಿಲ್ಲಾಡಳಿತವು ಜಿಲ್ಲೆಯಲ್ಲಿ ಆದೇಶಿಸಿರುವ ಸಂಪೂರ್ಣ ಕಠಿಣ ಲಾಕ್‌ಡೌನ್ ಎರಡನೇ ದಿನವಾದ ಇಂದು ಯಶಸ್ಸು ಕಂಡಿತು. ಇದಕ್ಕೆ ನಗರವೆಲ್ಲಾ ಸಂಪೂರ್ಣ ಸ್ತಬ್ದವಾಗಿದ್ದೇ ಸಾಕ್ಷಿ.

ಕೊರೊನಾ ಎರಡನೇ ಅಲೆಯು ಪ್ರಾರಂಭವಾದ ನಂತರ ಸರ್ಕಾರ ಜಾರಿಗೆ ತಂದ ಜನತಾ ಕರ್ಫ್ಯೂ ಬೆಳಗ್ಗೆ 10 ಗಂಟೆಯ ನಂತರ ಲಾಕ್‌ಡೌನ್ ಯಶಸ್ಸು ಕಂಡಿರಲಿಲ್ಲ. ಆದರೆ, ಜಿಲ್ಲಾಡಳಿತ ಜಾರಿಗೆ ತಂದ ಸಂಪೂರ್ಣ ಕಠಿಣ ಲಾಕ್‌ಡೌನ್‌ಗೆ ಪ್ರತಿನಿತ್ಯ ಬೆಳಿಗ್ಗೆ ಜನ ಜಂಗುಳಿಯಿಂದ ಇರುತ್ತಿದ್ದ ರಸ್ತೆಗಳು ಬಿಕೋ ಎನ್ನುತ್ತಿದ್ದವು. ವಾಹನಗಳ ಓಡಾಟವೂ ಕ್ಷೀಣಿಸಿತ್ತು.

ಮೊದಲು ಬೆಳಗ್ಗೆ 6 ರಿಂದ 10 ಗಂಟೆವರೆಗೆ ಜನರಿಗೆ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ನೀಡಿದ್ದರಿಂದ ಜನರು ವಿನಾಕಾರಣ ಹೊರಗಡೆಗೆ ಬಂದು ಓಡಾಡುತ್ತಿದ್ದರು. ಹೀಗೆ ಬರುವ ಜನರನ್ನು ನಿಯಂತ್ರಿಸುವುದೇ ಜಿಲ್ಲಾಡಳಿತಕ್ಕೆ ಕಷ್ಟವಾಗಿತ್ತು. ಆದರೆ, ಈಗ ಕಠಿಣ ಲಾಕ್‌ಡೌನ್ ಜಾರಿಗೊಳಿಸಲಾಗಿದೆ. ಬೆಳಗ್ಗೆಯ ಜನರ ಓಡಾಟಕ್ಕೆ ಕಡಿವಾಣ ಬಿದ್ದಂತೆ ಆಗಿದೆ. ಹೀಗಾಗಿ, ನಗರದ ರಸ್ತೆಗಳಲ್ಲಿ ಸ್ಮಶಾನ ಮೌನ ಆವರಿಸಿದೆ. ಆಗೊಂದು, ಈಗೊಂದು ವಾಹನ ಓಡಾಟ ಬಿಟ್ಟರೇ ಎಲ್ಲವೂ ನಿಶ್ಯಬ್ಧವಾಗಿತ್ತು.

ಜನರಿಗೆ ಮನೆಯಿಂದ ಹೊರಗೆ ಬಂದು ಸುಖಾಸುಮ್ಮನೆ ವಾಹನಗಳಲ್ಲಿ ಓಡಾಡಿದರೆ ಕೇಸು ಬೀಳಬಹುದೆಂಬ ಭೀತಿ, ಅಲ್ಲದೇ ತಮಗೆ ಬೀಳಬಹುದಾದ ದಂಡ ಇತ್ಯಾದಿ ಕಾರಣಗಳಿಂದ ಬೆದರಿದ ಸಾರ್ವಜನಿಕರು, ನಗರದ ಬಹುತೇಕ ಕಡೆ ಮನೆಯಿಂದ ಹೊರ ಬಾರದೇ ತಮಗೆ ತಾವೇ ಸ್ವಯಂ ನಿರ್ಬಂಧ ಹಾಕಿಕೊಂಡಿದ್ದು ವಿಶೇಷವಾಗಿತ್ತು.

ಲಾಕ್‌ಡೌನ್ ಜಾರಿಯಲ್ಲಿದ್ದರೂ ಅಷ್ಟಿಷ್ಟು ಜನರಿಂದ ಇರುತ್ತಿದ್ದ ನಗರದ ಪ್ರಮುಖ ವಾಣಿಜ್ಯ ರಸ್ತೆಗಳಾದ ಕೆ.ಆರ್. ಮಾರುಕಟ್ಟೆ, ಎಪಿಎಂಸಿ, ಹಳೇ ದಾವಣಗೆರೆಯ ಕೆಲವು ರಸ್ತೆಗಳು ಬಿಕೋ ಎನ್ನುತ್ತಿದ್ದವು.

ವಾಹನ ಮತ್ತು ಜನರ ಸಂಚಾರ ವಿರಳವಾಗಿತ್ತು. ಇದಲ್ಲದೇ ನಗರದ ಎಲ್ಲಾ ಪ್ರಮುಖ ವೃತ್ತಗಳಲ್ಲಿ, ರಸ್ತೆಗಳಲ್ಲಿ ಪೊಲೀಸರು ಅನಗತ್ಯವಾಗಿ ಓಡಾಟ ನಡೆಸುತ್ತಿದ್ದವರಿಗೆ ಎಚ್ಚರಿಕೆ ನೀಡಿ ಕಳುಹಿಸುತ್ತಿದ್ದರು.

ನಗರದ ಎಲ್ಲಾ ವೃತ್ತಗಳಲ್ಲಿ, ಮುಖ್ಯ ರಸ್ತೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಲಾಗಿತ್ತು. ದ್ವಿಪಥ ರಸ್ತೆಗಳನ್ನು ಬಂದ್ ಮಾಡಿ, ಕೇವಲ ಏಕಮುಖವಾಗಿ ಸಂಚರಿಸುವಂತೆ ವಾಹನ ಸವಾರರಿಗೆ ಸೂಚಿಸಲಾಗುತ್ತಿತ್ತು. ಯಾವುದೇ ವೃತ್ತಗಳಲ್ಲಿ ಪೊಲೀಸರು ಕಂಡು ಬರಲಿಲ್ಲ.

ನಗರದ ಕೆಎಸ್ಆರ್‌ಟಿಸಿ ಬಸ್‌ನಿಲ್ದಾಣ, ಖಾಸಗಿ ಬಸ್‌ನಿಲ್ದಾಣ, ಮಾರುಕಟ್ಟೆ ಪ್ರದೇಶಗಳು, ಆಟೋ ನಿಲ್ದಾಣಗಳು ಸೇರಿದಂತೆ ಜನ ನಿಬಿಡ ಪ್ರದೇಶಗಳಲ್ಲಿ ಅಘೋಷಿತ ಬಂದ್ ವಾತಾವರಣ ನಿರ್ಮಾಣವಾಗಿತ್ತು. ದಾವಣಗೆರೆ ನಗರವನ್ನು ಪ್ರವೇಶಿಸುವ ಪ್ರಮುಖ ರಸ್ತೆಗಳಲ್ಲಿ ನಾಕಾಬಂದಿ ಹಾಕಲಾಗಿತ್ತು. ಸಾರ್ವಜನಿಕರು ಹೊರಗೆ ಬಾರದೇ ಲಾಕ್‌ಡೌನ್‌ಗೆ ಸಹಕರಿಸಿದರು.

## ಆಕ್ಸಿಜನ್ ಸಿಲಿಂಡರ್ ಗಳ ವಿತರಣೆ



**ಕೊಟ್ಟೂರು**

ಕೊಟ್ಟೂರು, ಮೇ 23- ಮಾಜಿ ಶಾಸಕ ನೇಮರಾಜ ನಾಯ್ಕ ಅವರು ಕೊಟ್ಟೂರಿನ ಸಮುದಾಯ ಆರೋಗ್ಯ ಕೇಂದ್ರಕ್ಕೆ 30 ಆಕ್ಸಿಜನ್ ಸಿಲಿಂಡರ್‌ಗಳನ್ನು ನೀಡಿ, ರೋಗಿಗಳಿಗೆ ಹಣ್ಣು-ಹಂಪಲು ವಿತರಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಹಿರಿಯ ಮುಖಂಡ ಕೋಗಳಿ ಸಿದ್ದಲಿಂಗನಗೌಡ್ರು, ನಗರ ಘಟಕದ ಅಧ್ಯಕ್ಷ ಬಿ.ಆರ್.ವಿಕ್ರಂ, ತಿಪ್ಪೇಸ್ವಾಮಿ, ಉಮಾಪತಿ ಬೊಮ್ಮರೆಡ್ಡಿ, ಏರ್‌ಟೆಲ್ ಚಂದ್ರು, ಕೆ. ಬಸವರಾಜ್, ಡಾ. ಪೃಥ್ವಿ ಹಾಗೂ ಸಿಬ್ಬಂದಿಯವರು ಹಾಜರಿದ್ದರು.

## ಲಸಿಕೆ ಪೂರೈಸಲು ಮೊಡೆರ್ನಾ ನಕಾರ

**(1ನೇ ಪುಟದಿಂದ)** ಈ ಬಗ್ಗೆ ಮೊಡೆರ್ನಾ ಮಾತ್ರ ಪ್ರತಿಕ್ರಿಯೆ ನೀಡಿದ್ದು, ಲಸಿಕೆ ಪೂರೈಕೆ ಬಗ್ಗೆ ರಾಜ್ಯ ಸರ್ಕಾರಗಳ ಜೊತೆ ವ್ಯವಹರಿಸುವುದಿಲ್ಲ ಎಂದು ತಿಳಿಸಿದೆ ಎಂದು ಗಾರ್ಗ್ ಹೇಳಿದ್ದಾರೆ.

ಮೊಡೆರ್ನಾ ನೀತಿಯ ಪ್ರಕಾರ, ಭಾರತ ಸರ್ಕಾರದ ಜೊತೆ ಮಾತ್ರ ವ್ಯವಹರಿಸಲು ಸಾಧ್ಯ. ಯಾವುದೇ ರಾಜ್ಯ ಸರ್ಕಾರ ಇಲ್ಲವೇ ಖಾಸಗಿಯವರ ಜೊತೆ ವ್ಯವಹಾರ ಮಾಡಲಾಗದು ಎಂದು ತಿಳಿಸ ಲಾಗಿದೆ ಎಂದು ಪಂಜಾಬ್ ಸರ್ಕಾರದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸಾಧ್ಯವಿರುವ ಎಲ್ಲ ಮೂಲಗಳಿಂದ ಲಸಿಕೆ ಖರೀದಿಗೆ ಜಾಗತಿಕ ಟೆಂಡರ್ ಕರೆಯಬೇಕು. ರಾಜ್ಯದ ಜನತೆಗೆ ಆದಷ್ಟು ಶೀಘ್ರ ಲಸಿಕೆ ನೀಡಬೇಕು ಎಂದು ಪಂಜಾಬ್ ಮುಖ್ಯಮಂತ್ರಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದರು.

ಕೇಂದ್ರದಿಂದ ರಾಜ್ಯಕ್ಕೆ ಇದುವರೆಗೂ 44 ಲಕ್ಷಕ್ಕೂ ಕಡಿಮೆ ಲಸಿಕೆಗಳು ದೊರೆತಿವೆ. ಲಸಿಕೆ ಕೊರತೆ ನೀಗಿಸಲು ಎಲ್ಲಾ ಪ್ರಯತ್ನಗಳನ್ನು ನಡೆಸಲಾಗುವುದು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

18 ರಿಂದ 44ರ ವಯೋಮಾನದವರಿಗಾಗಿ ಕೇವಲ 4.2 ಲಕ್ಷ ಲಸಿಕೆಗಳನ್ನು ಮಾತ್ರ ಖರೀದಿಸಲು ರಾಜ್ಯಕ್ಕೆ ಸಾಧ್ಯ ವಾಗಿದೆ. ಇದರಲ್ಲಿ 3.65 ಲಕ್ಷ ಲಸಿಕೆ ಗಳನ್ನು ಈಗಾಗಲೇ ವಿತರಿಸಲಾಗಿದೆ ಎಂದು ಗಾರ್ಗ್ ಹೇಳಿದ್ದಾರೆ.

## ಫೇಸ್ ಶೀಲ್ಡ್ ಮಾಸ್ಕ್ ವಿತರಣೆ



ದಾವಣಗೆರೆ, ಮೇ 23- ನಗರದ ಹಿರಿಯ ಸಹಕಾರಿ ಧುರೀಣರಾಗಿದ್ದ ದಿ. ಶಾಮನೂರು ಕಲ್ಲೇಶಪ್ಪ ಮತ್ತು ಶ್ರೀಮತಿ ಪಾರ್ವತಮ್ಮ ನೆನಪಿಗಾಗಿ ಅವರ ಪುತ್ರರಾಗಿರುವ ಎಪಿಎಂಸಿ ನಿರ್ದೇಶಕ ಎಸ್.ಕೆ. ಪವಿತ್ರ ಮತ್ತು ಸ್ನೇಹಿತರು ದಾವಣಗೆರೆ ಉತ್ತರ ವಿಭಾಗದ ಸಂಚಾರಿ ಪೊಲೀಸ್ ಸಿಪಿಐ ತಿಮ್ಮಣ್ಣ ಅವರ ಸಮ್ಮುಖದಲ್ಲಿ ಠಾಣೆಯ ಎಲ್ಲಾ ಸಿಬ್ಬಂದಿಗಳಿಗೂ ಫೇಸ್ ಶೀಲ್ಡ್ ಮಾಸ್ಕ್ ವಿತರಿಸಿದರು.

## ಕೃಷಿ ಕಾಯ್ದೆ : ಮೇ 26ರ ಪ್ರತಿಭಟನೆಗೆ ಪ್ರತಿಪಕ್ಷಗಳ ಬೆಂಬಲ

ನವದೆಹಲಿ, ಮೇ 23 - ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ಸಂಯುಕ್ತ ಕಿಸಾನ್ ಮೋರ್ಚಾ ಇದೇ ದಿನಾಂಕ 26ರಂದು ಕರೆದಿರುವ ರಾಷ್ಟ್ರವ್ಯಾಪಿ ಪ್ರತಿಭಟನೆಗೆ ಕಾಂಗ್ರೆಸ್ ಸೇರಿದಂತೆ 12 ಪ್ರತಿಪಕ್ಷಗಳು ಬೆಂಬಲಿಸಿವೆ.

ಕೃಷಿ ಕಾಯ್ದೆಗಳನ್ನು ವಿರೋಧಿಸಿ ದೆಹಲಿ ಗಡಿಯಲ್ಲಿ ಹಲವಾರು ರೈತ ಸಂಘಟನೆಗಳು ಪ್ರತಿಭಟನೆ ನಡೆಸುತ್ತಿವೆ.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಮತ್ತಿತರರು, ಕೇಂದ್ರ ಸರ್ಕಾರ ತಕ್ಷಣವೇ ಮೂರು ಕೃಷಿ ಕಾಯ್ದೆಗಳ ವಾಪಸ್ಸಾತಿ ಕುರಿತು ರೈತರ ಜೊತೆ ಚರ್ಚೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ. ರೈತ ಹೋರಾಟಕ್ಕೆ ಮೇ 26ರಂದು ಆರು ತಿಂಗಳು ತುಂಬಲಿದ್ದು, ಅಂದು ರಾಷ್ಟ್ರವ್ಯಾಪಿ ಪ್ರತಿಭಟನೆಗೆ ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿರುವುದನ್ನು ನಾವು ಬೆಂಬಲಿಸುತ್ತೇವೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

## ಖಾಸಗಿ ಶಾಲಾ ಶಿಕ್ಷಕರಿಗೆ ಆರ್ಥಿಕ ಸಹಾಯಕ್ಕೆ ಸಂಘ ಒತ್ತಾಯ

ದಾವಣಗೆರೆ, ಮೇ 23- ಕೋವಿಡ್‌ನಿಂದ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಖಾಸಗಿ ಶಾಲೆಗಳಿಗೆ ಹಾಗೂ ಶಾಲಾ ಶಿಕ್ಷಕರ ನೆರವಿಗೆ ಸರ್ಕಾರ ಮುಂದಾಗಬೇಕು ಎಂದು ಜಿಲ್ಲಾ ಶಾಶ್ವತ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಸಂಘ ಸರ್ಕಾರವನ್ನು ಒತ್ತಾಯಿ ಸಿದೆ. ರಾಜಧಾನಿಯಲ್ಲಿರುವ ಕೆಲವು ಹೈಟೆಕ್ ಶಾಲೆಗಳನ್ನು ಗಮನದಲ್ಲಿಟ್ಟುಕೊಂಡು, ಸಚಿವರು ಕೊಡುತ್ತಿರುವ ಹೇಳಿಕೆಗಳು ಇಡೀ ರಾಜ್ಯದ ಸಣ್ಣಪುಟ್ಟ, ಮಧ್ಯಮ ವರ್ಗದ ಶಾಲೆಗಳು ಚಿಂತಾಜನಕ ಸ್ಥಿತಿಗೆ ಬರು ವಂತೆ ಆಗಿದೆ. ಲಕ್ಷಾಂತರ ಶಿಕ್ಷಕರು ಬೀದಿ ಪಾಲಾಗಿದ್ದಾರೆ. ಕೆಲವರು ವಿವಿಧ ಉದ್ಯೋಗಗಳನ್ನು ಅರಸಿ ಹೋದರೆ, ಕೆಲ ಶಿಕ್ಷಕರು ಪರಿಸ್ಥಿತಿ ಅರಗಿಸಿಕೊಳ್ಳಲು ಆಗದೇ ಕಂಗಾಲಾಗಿದ್ದಾರೆ ಎಂದು ಅಧ್ಯಕ್ಷ ತ್ಯಾವಣಿಗಿ ವೀರಭದ್ರಸ್ವಾಮಿ, ಗೌರವಾಧ್ಯಕ್ಷ ಕಂದನಕೋವಿ ಪ್ರಕಾಶ್ ತಿಳಿಸಿದ್ದಾರೆ.

## ಹನ್ನೆರಡನೇ ತರಗತಿ ಪರೀಕ್ಷೆಗೆ ಬಹುತೇಕ ಒಮ್ಮತ

**(1ನೇ ಪುಟದಿಂದ)** ಪರೀಕ್ಷೆ ನಡೆಸಲು ಸಿ.ಬಿ.ಎಸ್.ಇ. ಪ್ರಸ್ತಾಪಿಸಿದೆ. ಈ ಬಗ್ಗೆ ರಾಜ್ಯಗಳು ಮೇ 25ರ ಒಳಗೆ ತಮ್ಮ ಸಲಹೆಗಳನ್ನು ಕಳಿಸಬೇಕು ಎಂದು ಸಚಿವಾಲಯ ಕೇಳಿದೆ. ಬಹುತೇಕ ಶಾಲೆಗಳು ಅಲ್ಪಾವಧಿ ಪರೀಕ್ಷೆ ನಡೆಸುವುದರ ಪರವಾಗಿವೆ. ಇನ್ನು ಕೆಲ ರಾಜ್ಯಗಳೂ ಎರಡೂ ಆಯ್ಕೆಯನ್ನು ಸೇರಿಸಲು ಬಯಸಿವೆ.

ಸಿ.ಬಿ.ಎಸ್.ಇ. ಈಗಾಗಲೇ ಹತ್ತನೇ ತರಗತಿಯ ಮಂಡಳಿ ಪರೀಕ್ಷೆಗಳನ್ನು ರದ್ದುಗೊಳಿಸಿದ್ದು, ಪರ್ಯಾಯ ಅಂಕ ನೀತಿಯನ್ನು ರೂಪಿಸಿದೆ.

ಸಾಮಾನ್ಯವಾಗಿ ಫೆಬ್ರವರಿ - ಮಾರ್ಚ್ ತಿಂಗಳಲ್ಲಿ ಮಂಡಳಿ ಪರೀಕ್ಷೆಗಳು ನಡೆಯುತ್ತವೆ. ಈ ಬಾರಿ ಮೇ 4ರಂದು ಪರೀಕ್ಷೆ ನಡೆಸಲು ಉದ್ದೇಶಿಸಲಾಗಿತ್ತು.

ವಿದ್ಯಾರ್ಥಿಗಳ ಭವಿಷ್ಯದ ಹಿತಕ್ಕಾಗಿ ಪಿ.ಯು. ಪರೀಕ್ಷೆ ನಡೆಸಬೇಕು ಎಂದು ಕರ್ನಾಟಕದ ಶಿಕ್ಷಣ ಸಚಿವ ಸುರೇಶ್ ಕುಮಾರ್ ತಿಳಿಸಿದ್ದಾರೆ. ಕೇಂದ್ರ ಸರ್ಕಾರದ ಸಲಹೆಯನ್ನು ಪರಿಶೀಲಿಸಿ ಮುಂದಿನ ದಿನಗಳಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಸಭೆಯಲ್ಲಿ ಭಾಗವಹಿಸಿದ್ದ ಅವರು ಹೇಳಿದ್ದಾರೆ.

## ಟೆಲಿ ಕೌನ್ಸೆಲಿಂಗ್, ಜೆರಾಕ್ಸ್ ನೋಟ್ಸ್ ವಿತರಣೆ

ದಾವಣಗೆರೆ, ಮೇ 23- 6 ರಿಂದ 10ನೇ ತರಗತಿ, ಪಿಯುಸಿ, ಪದವಿ ವಿದ್ಯಾರ್ಥಿಗಳಿಗೆ ಟೆಲಿ ಕೌನ್ಸೆಲಿಂಗ್ ಹಾಗೂ ಜೆರಾಕ್ಸ್ ನೋಟ್ಸ್ ವಿತರಿಸುವ ಬಗ್ಗೆ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಚಿಂತನೆ ನಡೆಸಿದೆ ಎಂದು ಮಾಜಿ ಅಧ್ಯಕ್ಷ ಹರೀಶ್ ಕೆಂಗಲಹಳ್ಳಿ ತಿಳಿಸಿದ್ದಾರೆ. ಶಿಕ್ಷಣ ತಜ್ಞ ಪ್ರೊ. ಹರಿಪ್ರಸಾದ್ ಅವರಿಂದ ಆನ್‌ಲೈನ್ ಮೂಲಕ ಟೆಲಿಕೌನ್ಸೆಲಿಂಗ್ ನಡೆಸಲಾಗುವುದು. ಕೋವಿಡ್ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಮನೆಯಲ್ಲಿಯೇ ಇರುವ ಕಾರಣ ಸರಿಯಾದ ಮಾರ್ಗದರ್ಶನ ಸಿಗದೆ ಹಾಗೂ ಆತ್ಮವಿಶ್ವಾಸದ ಕೊರತೆ ಇರುವ ಕಾರಣ ಟೆಲಿಕೌನ್ಸೆಲಿಂಗ್ ಅಗತ್ಯತೆ ಇದೆ. ಸೂಕ್ತ ಸಲಹೆ ಹಾಗೂ ಆತ್ಮವಿಶ್ವಾಸ ತುಂಬಬೇಕಾಗಿದೆ. ಪೋಷಕರೂ ಸಹ ತಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

## ತಾಯಿ ಲಸಿಕೆ ಪಡೆಯಲು ಅಡ್ಡಿ ಇಲ್ಲ

**(1ನೇ ಪುಟದಿಂದ)** ಹಾಲುಣಿಸಬಹುದು ಎಂದು ತಿಳಿಸಿದ್ದಾರೆ.

ಮಗುವಿಗೆ ಜನ್ಮ ನೀಡಿದ ನಂತರ ಯಾವುದೇ ಸಮಯದಲ್ಲಿ ಲಸಿಕೆ ಪಡೆಯಬಹುದು ಎಂದವರು ಹೇಳಿದ್ದಾರೆ. ಹಾಲುಣಿಸುವ ತಾಯಿ ಲಸಿಕೆ ಪಡೆಯುವುದರಿಂದ ನವಜಾತ ಶಿಶುವಿನ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ.

ಹೆರಿಗೆ ನಂತರ ಲಸಿಕೆ ಮುಂದೂಡಲು ಯಾವುದೇ ಕಾರಣಗಳಿಲ್ಲ ಎಂದು ದೆಹಲಿಯ ಜಿ.ಟಿ. ಆಸ್ಪತ್ರೆಯ ಪ್ರೊ. ಡಾ. ಖಾನ್ ಅಮೀರ್ ಮರೂಫ್ ಹೇಳಿದ್ದಾರೆ.

# ಹಳ್ಳಿಗಳಲ್ಲಿ ಸೋಂಕು ಹರಡದಂತೆ ನಿಗಾ ವಹಿಸಬೇಕು

## ಕೊರೊನಾ ಜಾಗೃತಿ ಸಭೆಯಲ್ಲಿ ಪಿಡಿಓಗಳಿಗೆ ಶಾಸಕ ಎಸ್.ರಾಮಪ್ಪ ಸೂಚನೆ

ಮಲೇಬೆನ್ನೂರು, ಮೇ 23- ಹಳ್ಳಿಗಳಲ್ಲಿ ಕೊರೊನಾ ಸೋಂಕು ಹರಡದಂತೆ ಹೆಚ್ಚಿನ ನಿಗಾವಹಿಸಿ ಎಂದು ಶಾಸಕ ಎಸ್. ರಾಮಪ್ಪ ಗ್ರಾ.ಪಂ. ಟಾಸ್ಕ್‌ಫೋರ್ಸ್ ಸಮಿತಿಗೆ ಸೂಚಿಸಿದರು.

ಹೊಳೆಸಿರಿಗೆರೆ, ಕೆ.ಎನ್. ಹಳ್ಳಿ, ವಾಸನ, ಕೊಕ್ಕನೂರು ಮತ್ತು ಭಾನುವಳ್ಳಿ ಗ್ರಾ.ಪಂ.ಗಳಿಗೆ ಭೇಟಿ ನೀಡಿ, ಕೊರೊನಾ ಜಾಗೃತಿ ಸಭೆಗಳನ್ನು ನಿನ್ನೆ ನಡೆಸಿದ ಶಾಸಕರು, ಸೋಂಕಿನ ಕೊಂಡಿಯನ್ನು ಕತ್ತರಿಸುವ ಕೆಲಸವನ್ನು ಮಾಡದ ಹೊರತು ಕೊರೊನಾ ನಿಯಂತ್ರಣ ಸಾಧ್ಯವಿಲ್ಲ ಎಂದರು.

ಸಾವಿನ ಪ್ರಮಾಣವನ್ನು ಕಡಿಮೆ ಮಾಡಬೇಕಾದರೆ ಸರ್ಕಾರ ತುರ್ತು ಚಿಕಿತ್ಸೆಗೆ ಹೆಚ್ಚಿನ ಒತ್ತು ನೀಡಬೇಕೆಂದು ಒತ್ತಾಯಿಸಿದ ಶಾಸಕರು, ಹರಿಹರ ಆಸ್ಪತ್ರೆಗೆ ಆಕ್ಸಿಜನ್ ಬೆಡ್ ಹೆಚ್ಚಳದ ಜೊತೆಗೆ ವೆಂಟಿಲೇಟರ್ ಪ್ರಾರಂಭಿಸಲು ಕ್ರಮ ಕೈಗೊಳ್ಳಬೇಕೆಂದರು.



ಮಲೇಬೆನ್ನೂರು ಪಟ್ಟಣ ಹೋಬಳಿ ಕೇಂದ್ರವಾಗಿರುವುದರಿಂದ ಅಲ್ಲಿರುವ ಸಮುದಾಯ ಆರೋಗ್ಯ ಕೇಂದ್ರದಲ್ಲೂ ಆಕ್ಸಿಜನ್ ಬೆಡ್ ಸೌಲಭ್ಯ ಹಾಗೂ ಅಗತ್ಯವಿರುವ ವೈದ್ಯರು, ಸಿಬ್ಬಂದಿಗಳ ನೇಮಕಕ್ಕೆ ಜಿಲ್ಲಾಧಿಕಾರಿಗಳು ಗಮನಹರಿಸಬೇಕೆಂದು ಶಾಸಕ ರಾಮಪ್ಪ ಅವರು ಸಿರಿಗೆರೆಯಲ್ಲಿ ನಡೆದ ಸಭೆಯಲ್ಲಿ ಒತ್ತಾಯಿಸಿದ್ದಾರೆ.

ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ರಮೇಶ್‌ಕುಮಾರ್ ಮಾತನಾಡಿ, ಸಿರಿಗೆರೆಯಲ್ಲಿ ಇದುವರೆಗೆ 33 ಜನರಿಗೆ ಸೋಂಕು ತಗುಲಿದ್ದು, 20 ಜನ ಗುಣಮುಖರಾಗಿದ್ದಾರೆ. 8 ಜನ ಹೋಂ ಕ್ವಾರಂಟೈನ್‌ನಲ್ಲಿದ್ದು, ಒಬ್ಬರು ಮಾತ್ರ ಸೋಂಕಿನಿಂದ ಮೃತಪಟ್ಟಿದ್ದಾರೆಂದು ಮಾಹಿತಿ ನೀಡಿದರು.

ತಾ.ಪಂ. ಇಓ ಗಂಗಾಧರಪ್ಪ, ಪ್ರೊಬೇಷನರಿ ಪಿಎಸ್‌ಐ ಶರಣಬಸಪ್ಪ, ಗ್ರಾ.ಪಂ. ಸದಸ್ಯ ನೂರ್ ಅಹಮದ್, ಮಾಜಿ ಸದಸ್ಯರಾದ ಕೆ.ಬಿ. ಸದಾಶಿವಪ್ಪ, ಹಾಲೇಶ್ ಕರೇಕಲ್, ಮುಖಂಡರಾದ ಬೂದಾಳ್ ತಿಮ್ಮಣ್ಣ, ನಿವೃತ್ತ ಸೈನಿಕ ಪರಶುರಾಮ್, ಶಿವಕುಮಾರ್, ಕೆ. ರವಿ ಮತ್ತಿತರರು ಸಭೆಯಲ್ಲಿದ್ದರು.

ಕೆ.ಎನ್. ಹಳ್ಳಿಯಲ್ಲಿ ನಡೆದ ಸಭೆಯಲ್ಲಿ ಗ್ರಾ.ಪಂ. ಅಧ್ಯಕ್ಷ ಭರಮಗೌಡ ಪಾಟೀಲ್, ಉಪಾಧ್ಯಕ್ಷೆ ಗಿರಿಜಮ್ಮ ಗಿರಿಯಪ್ಪ, ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ವಿ. ಕುಬೇರಪ್ಪ, ಪಿಡಿಓ ಪರಮೇಶ್ವರಪ್ಪ ಮತ್ತಿತರರು ಭಾಗವಹಿಸಿದ್ದರು.

## ಯುವಕನಿಗೆ ಮೂತ್ರ ಕುಡಿಸಿದ ಪ್ರಕರಣ ಕ್ರಮಕ್ಕೆ ವಾಲ್ಮೀಕಿ ಸಮಾಜದ ಒತ್ತಾಯ



ದಾವಣಗೆರೆ, ಮೇ 23- ದಲಿತ ಯುವಕನಿಗೆ ಮೂತ್ರ ಕುಡಿಸಿದ ಆರೋಪದಲ್ಲಿ ಪೊಲೀಸ್ ಸಬ್ ಇನ್ ಸ್ಪೆಕ್ಟರ್ ರವರನ್ನು ಸೇವೆಯಿಂದಲೇ ವಜಾಗೊಳಿಸಬೇಕೆಂದು ವಾಲ್ಮೀಕಿ ನಾಯಕ ವಿದ್ಯಾರ್ಥಿ ನಿಲಯದ ಅಧ್ಯಕ್ಷ ಬಿ.ವೀರಣ್ಣ ಆಗ್ರಹಿಸಿದ್ದಾರೆ.

ನ್ಯಾಯ ಕೇಳಲೆಂದು ತಮ್ಮ ಬಳಿಗೆ ಬಂದಿದ್ದ ಚಿಕ್ಕಮಗಳೂರು ಜಿಲ್ಲೆಯ ಕಿರುಗುಂದ ಗ್ರಾಮದ ಪುನೀತನನ್ನು ಗೋಣಿಬೀಡು ಠಾಣೆ ಪಿ.ಎಸ್.ಐ ಅರ್ಜುನ್ ಅವರು ಪೊಲೀಸ್ ಠಾಣೆಯಲ್ಲಿ ಅಮಾನವೀಯವಾಗಿ ನಡೆಸಿಕೊಂಡು ಮೂತ್ರ ಕುಡಿಸಿ ಮಾನವೀಯ ಮೌಲ್ಯಗಳಿಗೆ ತಿಲಾಂಜಲಿ ಇಟ್ಟು ಮೃಗದಂತೆ ವರ್ತಿಸಿದ್ದಾರೆ ಎಂದು ಅವರು ಕಿಡಿ ಕಾರಿದ್ದಾರೆ.

ದಲಿತ ಯುವಕನ ಜಾತಿ ಕೇಳಿ ಮನಬಂದಂತೆ ಥಳಿಸಿದ್ದಲ್ಲದೆ ಜಾತಿ ನಿಂದನೆ ಮಾಡಿದ್ದಾರೆ ಎಂದು ತಿಳಿಸಿರುವ ವೀರಣ್ಣ, ಅನ್ಯಾಯಕ್ಕೊಳಗಾದ ಯುವಕನಿಗೆ ನ್ಯಾಯ ನೀಡಬೇಕು ಎಂದು ಆಗ್ರಹಿಸಿದ್ದಾರೆ.

## 'ಆಶಾ' ಇಂದು ಆನ್‌ಲೈನ್ ಚಳುವಳಿ

ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಜಿಲ್ಲಾ ಸಮಿತಿ ಇಂದು ಆನ್‌ಲೈನ್ ಚಳುವಳಿ ನಡೆಸಲಿದೆ. ರಾಜ್ಯದ 42000 ಆಶಾ ಕಾರ್ಯಕರ್ತೆಯರು ತಮ್ಮ ಕೆಲಸದ ಸ್ಥಳ ಅಥವಾ ಮನೆಯಿಂದ ಚಳುವಳಿ ನಡೆಸುವಂತೆ ಎಂದು ಜಿಲ್ಲಾಧ್ಯಕ್ಷ ಅಣಬೇರು ತಿಪ್ಪೇಸ್ವಾಮಿ ತಿಳಿಸಿದ್ದಾರೆ.

## ಅಣಬೇರು ಗ್ರಾಮಕ್ಕೆ ಶಾಸಕರ ಭೇಟಿ



ದಾವಣಗೆರೆ, ಮೇ 23- ಮಾಯಕೊಂಡ ವಿಧಾನಸಭಾ ಕ್ಷೇತ್ರದ ಶಾಸಕ ಪ್ರೊ. ಲಿಂಗಣ್ಣ ಹಾಗೂ ಬಯಲುಸೀಮೆ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಣಬೇರು ಜೀವನಮೂರ್ತಿ ಅವರು ಅಣಬೇರು ಗ್ರಾಮಕ್ಕೆ ಭೇಟಿ ನೀಡಿ ಗ್ರಾಮದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿದರು. ಕ್ಷೇತ್ರದ ಕೆಲ ಹಳ್ಳಿಗಳಿಗೆ ಶಾಸಕರು ನಾಮಕಾವಸ್ಥೆ ಭೇಟಿ ನೀಡುತ್ತಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಅಣಬೇರು ಗ್ರಾಮ ಪಂಚಾಯ್ತಿ ಕಾರ್ಯಾಲಯಕ್ಕೆ ಇಂದು ಭೇಟಿ ನೀಡಿ, ಜನಪ್ರತಿನಿಧಿಗಳು ಹಾಗೂ ಗ್ರಾಮದ ಮುಖಂಡರ ಜೊತೆ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಶ್ಯಾಗಲೆ ದೇವೇಂದ್ರಪ್ಪ, ಸಿಪಿಐ ಮಂಜುನಾಥ್ ಮತ್ತಿತರರು ಹಾಜರಿದ್ದರು.

## ನಗರದಲ್ಲಿ ಇಂದು ವರ್ಚ್ಯುವಲ್ ಉಪನ್ಯಾಸ

ಬಿಐಇಟಿ ಜೈವಿಕ ತಂತ್ರಜ್ಞಾನ ವಿಭಾಗದಿಂದ ಇಂದಿನಿಂದ 5 ದಿನ 'ಕೋವಿಡ್ -19ರ ಎದುರು ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿನ ಸಂಶೋಧನಾ ಅವಕಾಶಗಳು ಮತ್ತು ಸವಾಲುಗಳು' ಶೀರ್ಷಿಕೆಯಡಿ ವರ್ಚ್ಯುವಲ್ ಉಪನ್ಯಾಸ ನಡೆಯಲಿದೆ. ಇಂದು ಬೆಳಿಗ್ಗೆ 10.40ಕ್ಕೆ ವಿಟಿಯು ಕುಲಸಚಿವ ಡಾ. ಎ.ಎಸ್.ದೇಶಪಾಂಡೆ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಬಿಐಇಟಿ ನಿರ್ದೇಶಕ ವೈ.ವೃಷಭೇಂದ್ರಪ್ಪ ಅಧ್ಯಕ್ಷತೆ ವಹಿಸುವರು. ಪ್ರಾಚಾರ್ಯ ಡಾ.ಹೆಚ್.ಬಿ.ಅರವಿಂದ ಮತ್ತಿತ ರರು ಭಾಗವಹಿಸಲಿದ್ದಾರೆ. ವಿಶೇಷ ಸಂಪನ್ಮೂಲ ವ್ಯಕ್ತಿಗಳಾಗಿ ಅಮೇರಿಕಾ, ಜರ್ಮನಿ ಮತ್ತು ಕುವೈತ್ ದೇಶಗಳಿಂದ ನೇರವಾಗಿ ವಿದ್ಯಾರ್ಥಿಗಳ ಜೊತೆ ಭಾಗವಹಿಸಲಿದ್ದಾರೆ.

# ಆಮ್ಲಜನಕ ಉತ್ಪಾದನೆ, ಉಪಯೋಗಗಳು

**(2ನೇ ಪುಟದಿಂದ)** ಮತ್ತು ಪಾಲಿಸೈಥಿಮಿಯಾ ಕಾಯಿಲೆಯಲ್ಲಿ ಹಾಗೂ ನಿದ್ದೆ ಮಾಡುತ್ತಿರುವಾಗ ಅಥವಾ ವ್ಯಾಯಾಮ ಸಮಯದಲ್ಲಿ ಆಮ್ಲಜನಕ ಮತ್ತೆ 5 ರಷ್ಟು ಕಡಿಮೆಯಾಗುವುದು.

4. ಕೋವಿಡ್ ಸೋಂಕಿನಿಂದ ಶ್ವಾಸಕೋಶದಲ್ಲಿ ವೈಪರೀತ್ಯ ಉಂಟಾಗಿರುವ ಕೆಲ ರೋಗಿಗಳಿಗೆ ತಕ್ಷಣವೇ ಆಮ್ಲಜನಕ ಕೊಟ್ಟು ಜೀವ ಉಳಿಸಬೇಕಾಗುತ್ತದೆ.

**➥ ಆಮ್ಲಜನಕ ಕೊಡುವ ವಿಧಾನಗಳು :**

ರೋಗಿಗಳಿಗೆ ಆಮ್ಲಜನಕವನ್ನು 3 ವಿಧಾನದಿಂದ ಕೊಡಬಹುದಾಗಿದೆ.

1. ಒತ್ತಡದಲ್ಲಿ ಆಮ್ಲಜನಕ ತುಂಬಿರುವ ಸಿಲಿಂಡರ್‌ನಿಂದ
2. ದ್ರವ ಆಮ್ಲಜನಕ ಉಪಯೋಗಿಸಿ
3. ಆಮ್ಲಜನಕ ಸಾಂದ್ರತೆಗಳಿಂದ

ಈ ಸಾಧನ ಕೊಳ್ಳುವಾಗ ನಿಮಗೆ ಅನುಕೂಲವಾಗುವಂತಹ ಆಕಾರ, ಗಾತ್ರ, ತೂಕ, ಬ್ಯಾಟರಿ ಲೈಫ್ ವಿದ್ಯುಚ್ಛಕ್ತಿ ಬಳಕೆ ಆಮ್ಲಜನಕದ ಹೊರಹರಿವು ಮುಂತಾದ ವಿಷಯಗಳನ್ನು ಪರಿಗಣಿಸಬೇಕು.

ಈಗಾಗಲೇ ಭಾರತದಲ್ಲಿ ಫಿಲಿಪ್ಸ್ ಮತ್ತು ಮೆಡಿಕಾರ್ಟ್ ಮತ್ತೆ ಕೆಲ ಕಂಪನಿಯ ಆಮ್ಲಜನಕ ಸಾಂದ್ರಕಗಳು ಹೆಸರುವಾಸಿಯಾಗಿವೆ. ಉಪಕರಣದಲ್ಲಿರುವ ಸೌಲಭ್ಯಕ್ಕೆ ತಕ್ಕಂತೆ ಅವುಗಳ ಬೆಲೆ 50 ಸಾವಿರದಿಂದ 2 ಲಕ್ಷಕ್ಕೂ ಮೀರಬಹುದು.

ಉಪಕರಣ ಕೊಂಡಾಗ ತಂತ್ರಜ್ಞರು ಉಪಕರಣವನ್ನು ಮನೆಗೆ ತಂದು, ಅದರ ಕಾರ್ಯ ರೀತಿ, ಉಪಯೋಗಿಸುವ ವಿಧಾನ, ರೋಗಿಗೆ ನಳಿಕೆ/ಮಾಸ್ಕ್ ಮೂಲಕ ಆಮ್ಲಜನಕ ಜೋಡಿಸುವುದನ್ನು, ಆಮ್ಲಜನಕದ ಹರಿವು ಹೆಚ್ಚು ಕಡಿಮೆ ಮಾಡುವುದನ್ನು ಪ್ರತ್ಯಕ್ಷ ಪ್ರದರ್ಶನ ಮಾಡಿ ತೋರಿಸುತ್ತಾರೆ.

ಆಸ್ಪತ್ರೆಯಲ್ಲಿ ಬಳಸುವ ಸಿಲಿಂಡರ್ ಕೂಡ ಆಮ್ಲಜನಕ ಪೂರೈಸುತ್ತವೆ. ಮನೆಯಲ್ಲಿ ಬಳಸುವ ಆಮ್ಲಜನಕ ಸಾಧನಗಳೂ ಆಮ್ಲಜನಕ ಪೂರೈಸುತ್ತವೆ. ಆದರೆ ಸಿಲಿಂಡರ್‌ನಲ್ಲಿನ ಆಮ್ಲಜನಕ ಖಾಲಿಯಾಗುತ್ತಿರುತ್ತದೆ. ಆಗ ಸಿಲಿಂಡರ್ ಬದಲಿಸಬೇಕಾಗುತ್ತದೆ. ಆದರೆ ಆಮ್ಲಜನಕ ಸಾಂದ್ರಕಗಳು ಅಕ್ಷಯ ಪಾತ್ರೆಯಂತೆ ಬರಿದಾಗದೆ ಗಾಳಿ ಇರುವವರೆಗೂ ಆಮ್ಲಜನಕ ತಯಾರಿಸುತ್ತಿರುತ್ತದೆ, ವಿತರಿಸುತ್ತಲೇ ಇರುತ್ತದೆ.

ಆಸ್ಪತ್ರೆಯಲ್ಲಿನ ಸಿಲಿಂಡರ್‌ನಿಂದ ಆಮ್ಲಜನಕ ಪಡೆಯಲು ವಿದ್ಯುಚ್ಛಕ್ತಿಯೂ ಬೇಡ, ಬ್ಯಾಟರಿಯೂ ಬೇಡ. ಒತ್ತಡದಲ್ಲಿ ಆಮ್ಲಜನಕ ಇರುವುದರಿಂದ ರೋಗಿ ಉಸಿರೆಳೆದುಕೊಳ್ಳುವ ಕ್ರಿಯೆಯ ಪ್ರೇರಣೆಯಿಂದಲೇ ಆಮ್ಲಜನಕ ಹೊರಬರುತ್ತದೆ. ಸುದೀರ್ಘ ಕಾಲದ ಬಳಕೆಯಲ್ಲಿ ಸಿಲಿಂಡರ್‌ಗಳು ಮಿತವ್ಯಯ.

**➥ ದ್ರವರೂಪದ ಆಮ್ಲಜನಕ ಎಂದರೇನು?**

ಸಿಲಿಂಡರ್‌ನಲ್ಲಿರುವ ಅನಿಲ ರೂಪದ ಆಮ್ಲಜನಕಕ್ಕಿಂತ ದ್ರವರೂಪದ ಆಮ್ಲಜನಕವನ್ನು ನಿರಂತರವಾಗಿ ಅಗತ್ಯವಿರುವವರಿಗೆ ಕೊಡಬಹುದು.

ದ್ರವರೂಪದ ಆಮ್ಲಜನಕವು ಕಡಿಮೆ ತೂಕವಿರುತ್ತದೆ. ಹೆಚ್ಚು ಸಾಂದ್ರತೆ ಹಾಗೂ ಹೆಚ್ಚು ಬಾಳಿಕೆ ಬರುತ್ತದೆ.

ಅನಿಲರೂಪದ ಆಮ್ಲಜನಕವನ್ನು ಮೈನಸ್ 297 ಡಿಗ್ರಿ ಫ್ಯಾರನ್ ಹೀಟ್ ಅಥವಾ ಮೈನಸ್ 183 ಡಿಗ್ರಿ ಸೆಂಟಿಗ್ರೇಡ್‌ನಲ್ಲಿ ತಂಪು ಮಾಡಿದಾಗ ಈ ಉಷ್ಣತೆಯಲ್ಲಿ ದ್ರವರೂಪದ ಆಮ್ಲಜನಕವಾಗಿರುತ್ತದೆ. ಇದನ್ನು ಕಡಿಮೆ ಒತ್ತಡದಲ್ಲಿ ಶೇಖರಿಸಬಹುದು.

ದ್ರವರೂಪದ ಆಮ್ಲಜನಕದ ಉಷ್ಣತೆ ಹೆಚ್ಚಿದಾಗ ಅನಿಲ ರೂಪದ ಆಮ್ಲಜನಕ ದೊರಕುತ್ತದೆ. ಒಂದು ಲೀಟರ್ ದ್ರವರೂಪದ ಆಮ್ಲಜನಕ 860 ಲೀಟರ್ ಅನಿಲ ರೂಪದ ಆಮ್ಲಜನಕವನ್ನು ನೀಡುತ್ತದೆ.

ಕಾಯಿಲೆಗಳು, ಹೃದಯ ವೈಫಲ್ಯ ರೋಗಿಗಳಿಗೆ ದ್ರವರೂಪದ ಆಮ್ಲಜನಕ ತುಂಬಾ ಸಹಕಾರಿ. ಇತ್ತೀಚೆಗೆ ಕೊರೊನಾ ರೋಗಿಗಳಿಗೆ ವೆಂಟಿಲೇಟರ್, HFNO, ಅಥವಾ Oxygen Therapy ಇದಕ್ಕೆ ಬಹಳ ಪರಿಣಾಮಕಾರಿಯಾಗಿದೆ.

## ಅಲೋಪತಿ ಹೇಳಿಕೆ ವಿವಾದಕ್ಕೆ ಬಾಬಾ ರಾಮದೇವ್ ವಿಷಾದ

ನವದೆಹಲಿ, ಮೇ 23 - ಅಲೋಪತಿ ವೈದ್ಯಕೀಯ ವ್ಯವಸ್ಥೆ ಬಗ್ಗೆ ಟೀಕಿಸಿದ್ದ ಯೋಗ ಗುರು ಬಾಬಾ ರಾಮದೇವ್, ತಮ್ಮ ಹೇಳಿಕೆಗಳಿಗಾಗಿ ವಿಷಾದಿಸಿದ್ದಾರೆ. ಕೇಂದ್ರ ಆರೋಗ್ಯ ಸಚಿವ ಹರ್ಷ ವರ್ಧನ್ ಅವರು, ರಾಮದೇವ್ ಹೇಳಿಕೆ ತೀವ್ರ ಆಕ್ಷೇಪಾರ್ಹ, ಈ ಹೇಳಿಕೆ ವಾಪಸ್ ಪಡೆಯಬೇಕು ಎಂದು ಹೇಳಿದ್ದರು.

ರಾಮದೇವ್‌ಗೆ ಕಠಿಣ ಪದಗಳ ಪತ್ರ ಬರೆದಿದ್ದ ಹರ್ಷ ವರ್ಧನ್, ನಿಮ್ಮ ಹೇಳಿಕೆಯಿಂದ ಕೊರೊನಾ ವಾರಿಯರ್‌ಗಳಿಗೆ ಅವಮಾನವಾಗಿರುವುದಷ್ಟೇ ಅಲ್ಲದೇ, ದೇಶದ ಜನರ ಭಾವನೆಗಳಿಗೆ ತೀವ್ರ ಧಕ್ಕೆಯಾಗಿದೆ ಎಂದು ಹೇಳಿದ್ದರು.

ರಾಮದೇವ್ ಅವರು ಅಲೋಪತಿ ವೈದ್ಯಕೀಯ ಪದ್ಧತಿಯನ್ನು ಮೂರ್ಖ ವಿಜ್ಞಾನ ಎಂದು ಹೇಳಿದ್ದರು. ಔಷಧ ನಿಯಂತ್ರಕರಿಂದ ಅನುಮತಿ ಪಡೆದಿರುವ ರೆಮ್ಡಿಸಿವಿರ್, ಫಾವಿಫ್ಲು ಮತ್ತಿತರ ಔಷಧಗಳು ಕೊರೊನಾ ಗುಣಪಡಿಸಲು ವಿಫಲವಾಗಿರುವ ಬಗ್ಗೆ ರಾಮದೇವ್ ಮಾತನಾಡಿದ್ದರು.

ಅಲೋಪತಿ ಔಷಧಿ ಸೇವಿಸಿದ ನಂತರ ಲಕ್ಷಾಂತರ ರೋಗಿಗಳು ಸಾವನ್ನಪ್ಪಿದ್ದಾರೆ ಎಂದು ರಾಮದೇವ್ ಹೇಳಿದ್ದನ್ನು ವೈದ್ಯಕೀಯ ಒಕ್ಕೂಟವಾದ ಐ.ಎಂ.ಎ. ಖಂಡಿಸಿತ್ತು.

ಸಚಿವರ ಪತ್ರದ ನಂತರ ಹೇಳಿಕೆ ನೀಡಿರುವ ರಾಮದೇವ್, ಹೇಳಿಕೆಗಳನ್ನು ವಾಪಸ್ ಪಡೆಯುತ್ತೇನೆ. ವಿವಾದಕ್ಕೆ ವಿಷಾದವಿದೆ. ಈ ವಿವಾದಕ್ಕೆ ತೆರೆ ಎಳೆಯಲು ಬಯಸುತ್ತೇನೆ ಎಂದಿದ್ದಾರೆ.

## ರೆಮ್‌ಡಿಸಿವಿರ್ ಚುಚ್ಚುಮದ್ದು ಡ್ರಿಪ್ ಹಾಕಿದ ಶಾಸಕ

ಸೂರತ್, ಮೇ 23 - ಗುಜರಾತ್‌ನ ಸೂರತ್‌ನಲ್ಲಿರುವ ಸರ್ತಾನಾದ ಸಮುದಾಯ ಕೋವಿಡ್ ಕೇರ್ ಕೇಂದ್ರದಲ್ಲಿ ಬಿಜೆಪಿ ಶಾಸಕರೊಬ್ಬರು ರೋಗಿಯೊಬ್ಬರಿಗೆ ರೆಮ್ ಡಿಸಿವಿರ್ ಚುಚ್ಚುಮದ್ದು ನೀಡಲು ಮುಂದಾಗುತ್ತಿರುವ ದೃಶ್ಯ ವೈರಲ್ ಆಗಿದೆ.

ವಿ.ಡಿ. ಜಲವಾಡಿಯ ಅವರು ರೆಮ್ ಡಿಸಿವಿರ್ ಚುಚ್ಚುಮದ್ದು ತುಂಬಿಕೊಂಡು, ಅದನ್ನು ರೋಗಿಯೊಬ್ಬರಿಗೆ ನೀಡಲು ನೆರವಾಗುತ್ತಿದ್ದುದು ಕಂಡು ಬಂದಿದೆ.

ಕಾಂಗ್ರೆಸ್ ವಕ್ತಾರ ಜಯರಾಜ್ ಸಿನ್ಹ ಪರ್ಮಾರ್ ಅವರು ಶಾಸಕರ ಕೃತ್ಯವನ್ನು ಖಂಡಿಸಿದ್ದಾರೆ. ಆದರೆ, ಈ ಬಗ್ಗೆ ಸಮರ್ಥಿಸಿಕೊಂಡಿರುವ ಜಲವಾಡಿಯ, ನಾನೇನು ರೋಗಿಗೆ ಚುಚ್ಚುಮದ್ದು ನೀಡಿಲ್ಲ. ಡ್ರಿಪ್ ಬಾಟಲಿಗೆ ಔಷಧಿ ಹಾಕಿದ್ದೇನೆ. ಈ ರೀತಿ ಮಾಡಬಾರದಿತ್ತು ಎಂದು ಯಾರಾದರೂ ಭಾವಿಸಿದರೆ, ಅವರ ಬಳಿ ಕ್ಷಮೆ ಯಾಚಿಸುವುದಾಗಿ ತಿಳಿಸಿದ್ದಾರೆ.

## ನಕಲಿ ವೈದ್ಯರೆಂಬ ಆರೋಪ : ಅಧಿಕಾರಿಗಳ ದಾಳಿ, ಕ್ಲಿನಿಕ್‌ಗೆ ಬೀಗ

ಹೊನ್ನಾಳಿ, ಮೇ 23 - ತಹಶೀಲ್ದಾರ್ ಬಸನಗೌಡ ಕೋಟೂರ ನೇತೃತ್ವದಲ್ಲಿ ಭಾನುವಾರ ದಾಳಿ ನಡೆಸಿದ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಕೆಂಚಪ್ಪ ಆರ್.ಬಂತಿ ತಾಲ್ಲೂಕಿನ ಮಲೇಕುಂಬಳೂರು ಗ್ರಾಮದಲ್ಲಿ ಅನಧಿಕೃತವಾಗಿ ನಡೆಸುತ್ತಿದ್ದ ಕ್ಲಿನಿಕ್‌ಗೆ ಬೀಗ ಮುದ್ರೆ ಹಾಕಿದ ಘಟನೆ ನಡೆದಿದೆ.

ಜಿಲ್ಲಾಧಿಕಾರಿಗಳ ವಿಡಿಯೋ ಕಾನ್ಫರೆನ್ಸ್ ಸೂಚನೆಯ ಮೇರೆಗೆ ನಕಲಿ ವೈದ್ಯರ ಹಾವಳಿ ತಡೆಗಟ್ಟುವ ಹಿನ್ನೆಲೆಯಲ್ಲಿ ತಾಲ್ಲೂಕಿನ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಈ ದಾಳಿ ನಡೆಸಲಾಗಿದೆ ಎನ್ನಲಾಗಿದ್ದು ತಾಲ್ಲೂಕಿನಾದ್ಯಾಂತ ಈ ರೀತಿಯ ಪರಿಶೀಲನೆ ಕಾರ್ಯ ಮುಂದುವರೆಸುವುದಾಗಿ ತಿಳಿಸಿರುವರು.



ಮಲೇಕುಂಬಳೂರು ಗ್ರಾಮ ಪಂಚಾಯ್ತಿ ಅಧ್ಯಕ್ಷ ವಿಕಾಸ್ ಪ್ರತಿಕ್ರಿಯಿಸಿ ಗ್ರಾಮದಲ್ಲಿ 17 ವರ್ಷಗಳಿಂದ ವೈದ್ಯ ವೃತ್ತಿಯನ್ನು ನಡೆಸುತ್ತಿದ್ದಾರೆಂದು ಮಾಹಿತಿ ನೀಡಿದ್ದಾರೆ.

ದಾವಣಗೆರೆಯ ಸರಸ್ವತಿ ನಗರದ ನಿವಾಸಿ ರಂಗನಾಥ್ ತಾಲ್ಲೂಕಿನ ಮಲೇಕುಂಬಳೂರು ಗ್ರಾಮದಲ್ಲಿ ಅನಧಿಕೃತವಾಗಿ ಕ್ಲಿನಿಕ್ ನಡೆಸುತ್ತಿದ್ದ ಎಂಬ ಆರೋಪದ ಮೇಲೆ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಅಧಿಕಾರಿಗಳು, ರಂಗನಾಥ್ ಬಳಿ ಕ್ಲಿನಿಕ್ ನಡೆಸಲು ಬೇಕಿರುವ ಅಗತ್ಯವಾದ ದಾಖಲೆಗಳನ್ನು ಕೇಳಿದರೆ ರಂಗನಾಥ್ ಯಾವುದೇ ದಾಖಲೆಗಳನ್ನು ತೋರಿಸಲಿಲ್ಲ ಎಂಬುದಾಗಿ ತಿಳಿದುಬಂದಿದೆ.

**ಡೆಡ್‌ಲೈನ್:** ಕ್ಲಿನಿಕ್ ನಡೆಸಲು ಅಗತ್ಯವಾದ ದಾಖಲೆಗಳನ್ನು ಹಾಗೂ ವೈದ್ಯ ವೃತ್ತಿ ನಡೆಸಲು ಅಗತ್ಯವಾದ ವಿದ್ಯಾರ್ಹತೆ ಹೊಂದಿದ ಪ್ರಮಾಣ ಪತ್ರಗಳನ್ನು 24 ಗಂಟೆಗಳೊಳಗೆ ತಾಲ್ಲೂಕು ಆರೋಗ್ಯಾಧಿಕಾರಿ ಕಚೇರಿಗೆ ಹಾಜರುಪಡಿಸಬೇಕು. ಇಲ್ಲದಿದ್ದರೆ ಕಾನೂನು ಪ್ರಕಾರ ಕ್ರಮ ಜರುಗಿಸಲಾಗುವುದು ಎಂದು ತಾಲ್ಲೂಕು ಅಧಿಕಾರಿಗಳು ಎಚ್ಚರಿಸಿದ್ದಾರೆ.

ಇಒ ಗಂಗಾಧರಮೂರ್ತಿ, ಉಪತಹಶೀಲ್ದಾರ್ ಇಂಗಳಗುಂದಿ, ರಾಜಸ್ವ ನಿರೀಕ್ಷಕ ರಮೇಶ್, ಆರೋಗ್ಯಾಧಿಕಾರಿ ಡಾ. ಕೆಂಚಪ್ಪ, ಸಿಪಿಐ ದೇವರಾಜ್, ಪಿಎಸ್‌ಐ ಬಸನಗೌಡ ಬಿರಾದಾರ ಮತ್ತಿತರರು ಉಪಸ್ಥಿತರಿದ್ದರು.

## ಡಿಎಪಿ ರಸಗೊಬ್ಬರದ ಸಬ್ಸಿಡಿ ಹೆಚ್ಚಳ ಕೇಂದ್ರದ ಕ್ರಮಕ್ಕೆ ಲಿಂಗರಾಜ್ ಸ್ವಾಗತ



ದಾವಣಗೆರೆ,ಮೇ 23- ಡಿಎಪಿ ರಸಗೊಬ್ಬರದ ಸಬ್ಸಿಡಿಯನ್ನು ಹೆಚ್ಚಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ಭಾರತೀಯ ರೈತ ಒಕ್ಕೂಟದ ಜಿಲ್ಲಾಧ್ಯಕ್ಷ ಶಾಮನೂರು ಹೆಚ್.ಆರ್. ಲಿಂಗರಾಜ್ ಸ್ವಾಗತಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಕೇಂದ್ರದ ಈ ನಿರ್ಧಾರದಿಂದಾಗಿ ರಸಗೊಬ್ಬರವನ್ನು ಹಳೇ ದರಕ್ಕೆ ಕೊಟ್ಟಂತಾಗಿದ್ದು, ರೈತರಿಗೆ ತುಂಬಾ ಅನುಕೂಲವಾಗಿದೆ ಎಂದು ತಿಳಿಸಿದ್ದಾರೆ.

ಗೊಬ್ಬರವನ್ನು ಗ್ರಾಮೀಣ ಪ್ರದೇಶದ ವಿ.ಎಸ್.ಎಸ್.ಎನ್. ಮೂಲಕ ರೈತರಿಗೆ ಕೊಡುವ ವ್ಯವಸ್ಥೆ ಮಾಡುವಂತೆ ಲಿಂಗರಾಜ್ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಸರ್ಕಾರವು ಅಕ್ಕಿ ಗಿರಣಿಗಳನ್ನು ವಶಕ್ಕೆ ತೆಗೆದುಕೊಂಡು ಡ್ರೈಯರ್ ಮೂಲಕ ಒಣಗಿಸಿ ತೂಕ ಮಾಡಿದ್ದಲ್ಲಿ ರೈತರಿಗೆ ಸಹಾಯವಾಗುತ್ತದೆ ಎಂದು ಅವರು ಸರ್ಕಾರವನ್ನು ಕೇಳಿಕೊಂಡಿದ್ದಾರೆ. ಕೋವಿಡ್ ಹಿನ್ನೆಲೆಯಲ್ಲಿ ಖರೀದಿದಾರರು ಎಪಿಎಂಸಿಗೆ ಬರದ ಕಾರಣದಿಂದಾಗಿ ಭತ್ತವನ್ನು ಸರ್ಕಾರವೇ ಖರೀದಿಸಬೇಕೆಂದು ಲಿಂಗರಾಜ್ ಒತ್ತಾಯಿಸಿದ್ದಾರೆ.

## ಹರಿಹರ ತಾಲ್ಲೂಕಿನಲ್ಲಿ 109 ಜನರಿಗೆ ಪಾಸಿಟಿವ್

ಹರಿಹರ, ಮೇ 23- ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಭಾನುವಾರ 42 ಜನರು ಕೋವಿಡ್ ಟೆಸ್ಟ್‌ಗೆ ಒಳಗಾಗಿದ್ದು, 10 ಜನರಿಗೆ ಪಾಸಿಟಿವ್ ಬಂದಿದೆ.

ಇವತ್ತು 40 ಜನರಿಗೆ ಕೋವಿಶೀಲ್ಡ್ ಮೊದಲ ಡೋಸ್ ಲಸಿಕೆ ಹಾಕಿದ್ದೇವೆ. ಸೋಮವಾರ ಹರಳಹಳ್ಳಿ ಗ್ರಾಮದಲ್ಲಿ ಅಂಗವಿಕಲರಿಗೆ ಲಸಿಕೆ ಹಾಕುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದೆಂದು ಡಾ. ನಿಸಾರ್ ತಿಳಿಸಿದ್ದಾರೆ.

ಹರಿಹರ ತಾಲ್ಲೂಕಿನಲ್ಲಿ ಭಾನುವಾರ ಬೆಳಿಗ್ಗೆ ವರದಿ ಪ್ರಕಾರ 109 ಜನರಿಗೆ ಪಾಸಿಟಿವ್ ಬಂದಿದ್ದು, ಯಲವಟ್ಟಿ ಗ್ರಾಮವೊಂದರಲ್ಲೇ ಭಾನುವಾರ 13 ಜನರಿಗೆ ಸೋಂಕು ದೃಢಪಟ್ಟಿದೆ.

## 30 ಕಾರ್ಮಿಕರಿಗೆ ಪಾಸಿಟಿವ್ : 1 ತಿಂಗಳ ಕಾಲ ಕಾರ್ಖಾನೆ ಸ್ಥಗಿತ


**ಹರಿಹರ**

ಹರಿಹರ, ಮೇ 23- ನಗರದ ಹೊರವಲಯದಲ್ಲಿರುವ ಬೆಳ್ಳೂಡಿ ಕಾರ್ಗಿಲ್ ಕಾರ್ಖಾನೆಯ ಸುಮಾರು 30 ಕಾರ್ಮಿಕರಿಗೆ ಕೊರೊನಾ ಪಾಸಿಟಿವ್ ದೃಢಪಟ್ಟಿರುವುದರಿಂದ ಒಂದು ತಿಂಗಳ ಕಾಲ ಕಾರ್ಖಾನೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಮ್ಯಾನೇಜರ್ ಕವನ ತಿಳಿಸಿದ್ದಾರೆ.

ಕಾರ್ಗಿಲ್ ಕಂಪನಿಯು ಆಹಾರಕ್ಕೆ ಉಪಯುಕ್ತವಾದ ಪದಾರ್ಥಗಳನ್ನು ತಯಾರಿಸುವುದರಿಂದ ಇಲ್ಲಿನ ಸುಮಾರು 450 ಕಾರ್ಮಿಕರಿಗೆ ಕೊರೊನಾ ತಪಾಸಣೆ ಮಾಡಿಸಲಾಗಿದೆ. ಅದರಲ್ಲಿ 30 ಕಾರ್ಮಿಕರಿಗೆ ಕೊರೊನಾ ಪಾಸಿಟಿವ್ ಬಂದಿದೆ. ಕೊರೊನಾ ಸೋಂಕು ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ಅದು ಮುಂದೆ ದೊಡ್ಡ ಪ್ರಮಾಣದಲ್ಲಿ ಅನಾಹುತಕ್ಕೆ ಎಡೆಮಾಡಿಕೊಡುತ್ತದೆ ಎಂಬುದನ್ನು ಅರಿತುಕೊಂಡು ಕಾರ್ಖಾನೆಯ ಎಲ್ಲಾ ಕೆಲಸಗಳನ್ನು ಸ್ಥಗಿತಗೊಳಿಸಲಾಗಿದೆ.

ಕಾರ್ಗಿಲ್ ಕಂಪನಿಯಲ್ಲಿ ಕಾರ್ಖಾನೆಯ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ಮಾಡಲಾಗುತ್ತದೆ. ಈಗ ಕೊರೊನಾ ಪಾಸಿಟಿವ್ ಬಂದಿರುವವರಲ್ಲಿ ಕೆಲವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ, ಉಳಿದವರು ಹೋಮ್ ಐಸೋಲೇಷನ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಹೇಳಿದರು.

## ಹತ್ಯೆ ಪ್ರಕರಣ : ಒಲಂಪಿಕ್ ವಿಜೇತ ಸುಶೀಲ್ ಕುಮಾರ್ ಕಸ್ಟಡಿಗೆ



ನವದೆಹಲಿ, ಮೇ 23 - 23 ವರ್ಷದ ಕುಸ್ತಿ ಪಟು ಒಬ್ಬರ ಸಾವಿಗೆ ಸಂಬಂಧಿಸಿದಂತೆ ಒಲಂಪಿಕ್ ಪದಕ ಪಡೆದಿರುವ ಕುಸ್ತಿ ಪಟು ಸುಶೀಲ್ ಕುಮಾರ್ ಅವರನ್ನು ಆರು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ವಹಿಸಲಾಗಿದೆ.

ಕುಮಾರ್‌ರನ್ನು ನ್ಯಾಯಾಲಯದ ಎದುರು ಹಾಜರುಪಡಿಸಲಾಗಿತ್ತು. ಆಗ ಮೆಟ್ರೋಪಾಲಿಟನ್ ನ್ಯಾಯಮೂರ್ತಿ ದಿವ್ಯ ಮಲ್ಹೋತ್ರ ಅವರು 30 ನಿಮಿಷಗಳ ಕಾಲ ವಿಚಾರಣೆಗೆ ಅನುಮತಿ ನೀಡಿದ್ದರು.

ಅಪರಾಧಕ್ಕೆ ಕಾರಣವೇನು ಎಂಬುದನ್ನು ತಿಳಿಯಬೇಕಿದೆ ಹೀಗಾಗಿ ವಿಚಾರಣೆಗೆ ಅನುಮತಿ ನೀಡಬೇಕು. ಘಟನೆ ನಡೆದ ಕ್ರೀಡಾಂಗಣದ ಕ್ಯಾಮರಾ ನಾಶಗೊಳಿಸಲಾಗಿದ್ದು, ಡಿ.ಡಿ.ಆರ್. ಅನ್ನು ತೆಗೆದುಕೊಂಡು ಹೋಗಲಾಗಿದೆ. ಇದನ್ನೂ ವಶಪಡಿಸಿಕೊಳ್ಳಬೇಕಿದೆ. 12 ದಿನಗಳ ಕಾಲ ಕಸ್ಟಡಿಗೆ ಒಪ್ಪಿಸಬೇಕು ಎಂದು ವಿಚಾರಣೆ ವೇಳೆ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಅತುಲ್ ಶ್ರೀವಾಸ್ತವ ಮನವಿ ಸಲ್ಲಿಸಿದ್ದರು. ನಂತರ ನ್ಯಾಯಾಲಯ ಆರೋಪಿಯನ್ನು ಆರು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ವಹಿಸಿದೆ.

ಮೇ 4ರ ರಾತ್ರಿ ಸುಶೀಲ್ ಕುಮಾರ್ ಹಾಗೂ ಸಹಚರರು, ಕುಸ್ತಿ ಪಟು ಸಾಗರ್ ಧಂಕರ್ ಮೇಲೆ ಹಲ್ಲೆ ನಡೆಸಿದ್ದಾರೆ. ಗಾಯಗಳಿಂದ ಸಾಗರ್ ನಂತರದಲ್ಲಿ ಸಾವನ್ನಪ್ಪಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ತಲೆ ಮರೆಸಿಕೊಂಡಿದ್ದ ಕುಮಾರ್ ಹಾಗೂ ಆತನ ಸಹಚರರಾದ ಸಹ ಆರೋಪಿ ಅಜಯ್ ಜೊತೆಗೆ ದೆಹಲಿಯ ಮುಂಡ್ಕ ಪ್ರದೇಶದಲ್ಲಿ ಬಂಧಿಸಲಾಗಿತ್ತು.

## ಕೆಎಸ್ಸಾರ್ಟಿಸಿಯಿಂದ ಸಂಚಾರಿ ಆಕ್ಸಿಜನ್ ಬಸ್ ಒದಗಿಸಲು ಆಗ್ರಹ



ದಾವಣಗೆರೆ,ಮೇ 23- ಕೋವಿಡ್ ಸೋಂಕಿತರಿಗೆ ಆಗುತ್ತಿರುವ ಬೆಡ್ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಿಂದ ಸಂಚಾರಿ ಆಕ್ಸಿಜನ್ ಬಸ್ಸುಗಳನ್ನು ಒದಗಿಸುವಂತೆ ಜಿಲ್ಲಾ ಜೆಡಿಎಸ್ ಮುಖಂಡರುಗಳಾದ ಎಂ.ಎನ್. ನಾಗರಾಜ್ ಅವರು ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.

ಕೆಎಸ್ಸಾರ್ಟಿಸಿಯಿಂದ ಸಂಚಾರಿ ಆಕ್ಸಿಜನ್ ಬಸ್ಸುಗಳನ್ನು ಈಗಾಗಲೇ ರಾಜ್ಯದ ಹಲವು ಭಾಗಗಳಲ್ಲಿ ಒದಗಿಸಲಾಗಿದ್ದು, ನಗರದಲ್ಲೂ ಈ ವ್ಯವಸ್ಥೆಯನ್ನು ಕೂಡಲೇ ಮಾಡುವುದರ ಮೂಲಕ ಕೋವಿಡ್ ಸೋಂಕಿತರಿಗೆ ಅನುಕೂಲ ಮಾಡಿಕೊಡಬೇಕೆಂದು ಅವರು ಜಿಲ್ಲಾಧಿಕಾರಿಗಳನ್ನು ಕೇಳಿಕೊಂಡಿದ್ದಾರೆ.

ಜಿಲ್ಲೆಯ ಜನಪ್ರತಿನಿಧಿಗಳು, ಎಸ್ಪಿ, ಡಿಸಿ, ಆರೋಗ್ಯ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಕೋವಿಡ್ ನಿಯಂತ್ರಣಕ್ಕೆ ಸಾಕಷ್ಟು ಶ್ರಮಿಸುತ್ತಿದ್ದು ಶ್ಲಾಘನೀಯ ಎಂದಿರುವ ನಾಗರಾಜ್, ಸಂಚಾರಿ ಆಕ್ಸಿಜನ್ ಬಸ್ಸುಗಳನ್ನು ಒದಗಿಸಿದ್ದಲ್ಲಿ ಕೋವಿಡ್ ನಿಯಂತ್ರಣಕ್ಕೆ ಮತ್ತಷ್ಟು ಸಹಕಾರಿಯಾಗಲಿದೆ ಎಂದು ಆಶಯ ವ್ಯಕ್ತಪಡಿಸಿದ್ದಾರೆ.

## ಮುಂದುವರೆದ ರೆಡ್‌ಕ್ರಾಸ್ ಸಹಾಯ ಹಸ್ತ



ದಾವಣಗೆರೆ, ಮೇ 23- ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ದಾವಣಗೆರೆ ಜಿಲ್ಲಾ ಶಾಖೆಯಿಂದ ನಗರದ ಜಿಲ್ಲಾ ಚಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ರೆಡ್ ಕ್ರಾಸ್ ಸಂಸ್ಥೆಯ ಛೇರ್ಮನ್ ಡಾ. ಶಿವಕುಮಾರ್ ಅವರ ಮಾರ್ಗದರ್ಶನದ ಮೇರೆಗೆ ಆಕ್ಸಿಜನ್ ಕಾನ್ಸಂಟ್ರೇಟರನ್ನು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರಿಗೆ ಹಸ್ತಾಂತರಿಸಲಾಯಿತು.

ಈ ಸಂದರ್ಭದಲ್ಲಿ ಡಿಎಚ್‌ಓ ಡಾ. ನಾಗರಾಜ್, ಜಿಲ್ಲಾಸ್ಪತ್ರೆಯ ಅಧೀಕ್ಷಕ ಡಾ. ಜಯಪ್ರಕಾಶ್, ರೆಡ್‌ಕ್ರಾಸ್ ಸಂಸ್ಥೆಯ ವೈಸ್ ಛೇರ್ಮನ್‌ಗಳಾದ ಗೌಡ್ರು ಚನ್ನಬಸಪ್ಪ, ಡಿ.ಎಸ್. ಸಿದ್ದಣ್ಣ, ಕಾರ್ಯದರ್ಶಿ ಡಿ.ಎಸ್. ಸಾಗರ್, ನಿರ್ದೇಶಕರುಗಳಾದ ಆನಂದ ಜ್ಯೋತಿ, ಇನಾಯತ್‌ಉಲ್ಲಾ, ಕೆ.ಕೆ. ನಾಗರಾಜ್, ರವಿಕುಮಾರ್, ಕರಿಬಸವಪ್ಪ, ಆಸಿಯಾಬಾನು, ಶ್ರೀಕಾಂತ ಬಗರೆ ಮತ್ತಿತ್ತರರು ಉಪಸ್ಥಿತರಿದ್ದರು.

## 363 ಪಾಸಿಟಿವ್, 471 ಬಿಡುಗಡೆ, 3 ಸಾವು

ದಾವಣಗೆರೆ, ಮೇ 23- ಜಿಲ್ಲೆಯಲ್ಲಿ ಭಾನುವಾರ 363 ಜನರಲ್ಲಿ ಸೋಂಕು ದೃಢಪಟ್ಟಿದ್ದು, ಮೂವರು ಮರಣ ಹೊಂದಿದ್ದು, 471 ಜನರು ಗುಣಮುಖರಾದ ಬಗ್ಗೆ ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಪ್ರಸ್ತುತ ಜಿಲ್ಲೆಯಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 4452ಕ್ಕೆ ಏರಿಕೆಯಾಗಿದ್ದು, ಇಲ್ಲಿಯವರೆಗೆ 329 ಜನರು ಮೃತಪಟ್ಟಿದ್ದಾರೆ.

ದಾವಣಗೆರೆ ತಾಲ್ಲೂಕಿನಲ್ಲಿ 110, ಹರಿಹರ 60, ಜಗಳೂರು 9, ಚನ್ನಗಿರಿ 103, ಹೊನ್ನಾಳಿ 69 ಹಾಗೂ ಹೊರ ಜಿಲ್ಲೆಯಿಂದ ಬಂದಿರುವ 12 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ.

ಸಿ.ಜಿ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ನಿಟುವಳ್ಳಿಯ 63 ವರ್ಷದ ಮಹಿಳೆ, ಮಲೇಬೆನ್ನೂರಿನ 58 ವರ್ಷದ ಪುರುಷ ಹಾಗೂ ಎಸ್.ಎಸ್.ಐ.ಎಂ.ಎಸ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ 65 ವರ್ಷದ ಮಹಿಳೆ ಮೃತಪಟ್ಟಿದ್ದಾರೆ.


ಹುಟ್ಟುಹಬ್ಬದ ಶುಭಾಶಯಗಳು



ಮೊದಲನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ನಮ್ಮ ಮುದ್ದು ಮಗಳಾದ

ಕು|| ವರ್ಣಿಕ (Varnika)

ಮಗುವಿಗೆ ಜನ್ಮ ದಿನದ ಶುಭಾಶಯಗಳು

ಶುಭ ಕೋರುವವರು

ತಂದೆ: ನಿರಂಜನ್ ಟಿ.ಎನ್ ತಾಯಿ: ದಿವ್ಯ ಎಸ್.

ಅಜ್ಜ - ಅಜ್ಜಿ, ಚಿಕ್ಕು - ಚಿಕ್ಕಿ, ಅತ್ತೆ - ಮಾವ


## ಜಿಲ್ಲೆಯ ಅಂಗನವಾಡಿ ಕಾರ್ಯಕರ್ತೆಯರಿಗೆ ಸಹಾಯವಾಣಿ

ದಾವಣಗೆರೆ,ಮೇ 23- ಜಿಲ್ಲೆಯ ಅಂಗನವಾಡಿ ಕೇಂದ್ರದ ಫಲಾನುಭವಿಗಳು, ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಕುಂದುಕೊರತೆ ನೀಗಿಸುವ ಉದ್ದೇಶದಿಂದ ಜಿಲ್ಲಾ ಮಟ್ಟದ ಸಹಾಯವಾಣಿ ಪ್ರಾರಂಭಿಸಲಾಗಿದೆ.

ರಾಜ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಅಪೌಷ್ಠಿಕ ಮಕ್ಕಳ ಕುರಿತು ನ್ಯಾಯಮೂರ್ತಿಗಳಾದ ಎ.ಎನ್. ವೇಣುಗೋಪಾಲಗೌಡ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದು, ಈ ಹಿನ್ನೆಲೆಯಲ್ಲಿ ಜಿಲ್ಲಾ ಕಛೇರಿಯ 08192-264056 ಈ ದೂರವಾಣಿ ಸಂಖ್ಯೆಯನ್ನು ಸಹಾಯವಾಣಿಯಾಗಿ ಪ್ರಾರಂಭಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

## ನಂದಿಗುಡಿ, ಕೊಂಡಜ್ಜಿ ಮೊರಾರ್ಜಿ ಶಾಲೆಗಳಲ್ಲಿ ಕೋವಿಡ್ ಕಾಳಜಿ ಕೇಂದ್ರಕ್ಕೆ ಸ್ಥಳ ಪರಿಶೀಲನೆ

ಮಲೇಬೆನ್ನೂರು, ಮೇ 23- ಗ್ರಾಮೀಣ ಪ್ರದೇಶದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮತ್ತು ಸೋಂಕಿತರನ್ನು ಹೋಂ ಕ್ವಾರಂಟೈನ್ ಮಾಡದೇ ಕೋವಿಡ್ ಕೇರ್ ಸೆಂಟರ್‌ಗಳಿಗೆ ಕರೆತರಬೇಕೆಂಬ ಸರ್ಕಾರದ ನಿರ್ದೇಶನದ ಮೇರೆಗೆ ನಂದಿಗುಡಿ ಮತ್ತು ಕೊಂಡಜ್ಜಿಯಲ್ಲಿರುವ ಮೊರಾರ್ಜಿ ವಸತಿ ಶಾಲೆಗಳನ್ನು ಸಿಸಿ ಸೆಂಟರ್ ಮಾಡಲು ನಿರ್ಧರಿಸಲಾಗಿದೆ.

ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ, ತಾ.ಪಂ. ಇಒ ಗಂಗಾಧರಪ್ಪ ನೇತೃತ್ವದ ಅಧಿಕಾರಿಗಳ ತಂಡವು ನಂದಿಗುಡಿ ಸಮೀಪ ಇರುವ ಮೊರಾರ್ಜಿ ವಸತಿ ಶಾಲೆ ಮತ್ತು ಕೊಂಡಜ್ಜಿ ಸಮೀಪ ಇರುವ ಮೊರಾರ್ಜಿ ಹಾಗೂ ಇಂದಿರಾ ಗಾಂಧಿ ವಸತಿ ಶಾಲೆಗಳನ್ನು ಕೋವಿಡ್ ಕೇರ್ ಸೆಂಟರ್‌ಗಳನ್ನಾಗಿ ಮಾಡ ಲು ಸೌಲಭ್ಯಗಳನ್ನು ಪರಿಶೀಲಿಸಿತು. ಈಗಾಗಲೇ ಗುತ್ತೂರಿನಲ್ಲಿ ಸಿಸಿ ಸೆಂಟರ್‌ನಲ್ಲಿ 96 ಜನ ಮತ್ತು ಹರಿಹರ ನಗರದ ಎಸ್‌ಜೆವಿಪಿ ಸಿಸಿ ಸೆಂಟರ್‌ನಲ್ಲಿ 65 ಜನ ಸೋಂಕಿತರು ಇದ್ದಾರೆ.



ಹೊಸದಾಗಿ ಬರುವ ಸೋಂಕಿತರಿಗೆ ಈಗಿರುವ ಸಿಸಿ ಸೆಂಟರ್‌ನಲ್ಲಿ ಜಾಗ ಆಗುತ್ತಿಲ್ಲ. ಆದ್ದರಿಂದ ನಂದಿಗುಡಿ ಮತ್ತು ಕೊಂಡಜ್ಜಿ ಯಲ್ಲೂ ಕೋವಿಡ್ ಕೇರ್ ಸೆಂಟರ್ ತೆರೆಯ ಲು ಸಿದ್ದತೆ ಕೈಗೊಳ್ಳಲಾಗುತ್ತಿದೆ. ಅಗತ್ಯ ಬಿದ್ದರೆ ದೇವರಬೆಳಕೆರೆ ಗ್ರಾಮದಲ್ಲಿರುವ ಮೊರಾರ್ಜಿ ವಸತಿ ಶಾಲೆಯಲ್ಲೂ ಸಿಸಿ ಸೆಂಟರ್ ಪ್ರಾರಂಭಿಸ ಲಾಗುವುದೆಂದು ತಹಶೀಲ್ದಾರ್ ಮಾಹಿತಿ ನೀಡಿದರು. ತಾ. ಹಿರಿಯ ಆರೋಗ್ಯ ಸಹಾಯಕ ಎಂ. ಉಮ್ಮಣ್ಣ, ನಂದಿಗುಡಿ ಮೊರಾರ್ಜಿ ಶಾಲೆಯ ಪ್ರಾಂಶುಪಾಲ ಮಕ್ಸೂದ್ ಅಹಮದ್, ಉಕ್ಕಡಗಾತ್ರಿ ಪಿಡಿಒ ಸುನೀಲ್ ಈ ವೇಳೆ ಹಾಜರಿದ್ದರು.


|| ಶ್ರೀ ಉಜ್ಜಯಿನಿ ಸಿದ್ದೇಶ್ವರ ಪ್ರಸನ್ನ ||

ಕೈಲಾಸ ಶಿವಗಣಾರಾಧನೆ ಆಹ್ವಾನ



ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು ಅಂದನೂರು ಗ್ರಾಮದ ವಾಸಿ ಡಾ. ಶ್ರೀ ದೇವೇಂದ್ರಪ್ಪ ಮತ್ತು ಸಹೋದರರು ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 06.05.2021ನೇ ಗುರುವಾರ ಬೆಳಿಗ್ಗೆ 4.30ಕ್ಕೆ ನಮ್ಮ ಪೂಜ್ಯ ತಾಯಿಯವರಾದ (ದಿ. ಶ್ರೀ ಕಲ್ಲಪ್ಪನವರ ಧರ್ಮಪತ್ನಿ)

ಶ್ರೀಮತಿ ಹಾಲಮ್ಮ

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ : 24.05.2021ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹ, ಅಂದನೂರಿನಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಡಾ. ಶ್ರೀ ದೇವೇಂದ್ರಪ್ಪ ಮತ್ತು ಸಹೋದರರು, ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು ಮತ್ತು ಗೋಪನಾಳ್ ವಂಶಸ್ಥರು, ಗಂಗಾಮತ ವಂಶಸ್ಥರು, ಅಂದನೂರು ಹಾಗೂ ಬಂಧು-ಮಿತ್ರರು.



ಇಂಜಿನಿಯರ್ 'ಎಸ್.ಎಲ್. ಆನಂದಪ್ಪ' ಇವರಿಗೆ ಮಾತೃವಿಯೋಗ



ಶ್ರೀಮತಿ ಧ್ಯಾಮಮ್ಮ ಕೋಂ|| ಲಕ್ಷಪ್ಪ ಯಕ್ಕನಹಳ್ಳಿ

ಮರಣ: 22/05/2021

ಅಂದು ತಾಯಿಯ ಮಗನಾಗಿ, ಇಂದು ವೃದ್ಧಾಪ್ಯದಲ್ಲಿ ತಾಯಿಗೆ ತಂದೆಯಾಗಿ, ಆರೈಕೆಯನ್ನು ಮಾಡಿ, ಮಗುವಿನಂತೆ ನೋಡಿಕೊಂಡ ನಮ್ಮ ಅಭಿಯಂತರರಾದ ಶ್ರೀ ಆನಂದಪ್ಪ ಎಸ್.ಎಲ್. ರವರಿಗೆ ತಾಯಿಯ ಅಗಲಿಕೆಯ ದುಃಖ ಭರಿಸುವ ಶಕ್ತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

: ಇವರ ಆತ್ಮಕ್ಕೆ ಚಿರಶಾಂತಿ ಕೋರುವವರು :

ಎಮ್.ಪಿ.ಎಸ್. ಕನ್ಸಟ್ರಕ್ಷನ್ಸ್ ಹರಪನಹಳ್ಳಿ

ಕಾಂಟ್ರ್ಯಾಕ್ಟರ್ ಎಮ್.ಪಿ. ಶಶಿಭೂಷಣ

ಇಂಜಿನಿಯರ್ ಸಿದ್ದಿಕ್ ಅಹ್ಮದ್, ಶ್ರೀಕಾಂತ್,

ಭರತ್‌ಕುಮಾರ್ ಸುಪರ್‌ವೈಸರ್ ಶೇರ್ ಅಲಿ,

ಇಮಾಮ್ ಸಾಬ್, ಅಬ್ರಾರ್ ಹುಸೇನ್ ಹಾಗೂ

ಕಂಪನಿಯ ಎಲ್ಲಾ ಸಹದ್ಯೋಗಿ ಬಳಗ



ಇಂಜಿನಿಯರ್ 'ಎಸ್.ಎಲ್. ಆನಂದಪ್ಪ' ಇವರಿಗೆ ಮಾತೃವಿಯೋಗ

ಅಂದು ತಾಯಿಯ ಮಗನಾಗಿ, ಇಂದು ವೃದ್ಧಾಪ್ಯದಲ್ಲಿ ತಾಯಿಗೆ ತಂದೆಯಾಗಿ, ಆರೈಕೆಯನ್ನು ಮಾಡಿ, ಮಗುವಿನಂತೆ ನೋಡಿಕೊಂಡ ನಮ್ಮ ಅಭಿಯಂತರರಾದ ಶ್ರೀ ಆನಂದಪ್ಪ ಎಸ್.ಎಲ್. ರವರಿಗೆ ತಾಯಿಯ ಅಗಲಿಕೆಯ ದುಃಖ ಭರಿಸುವ ಶಕ್ತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

: ಇವರ ಆತ್ಮಕ್ಕೆ ಚಿರಶಾಂತಿ ಕೋರುವವರು :

* ಎಮ್.ಪಿ. ಶಶಿ ಭೂಷಣ (ಎಮ್.ಪಿ.ಎಸ್ ಕನ್ಸಟ್ರಕ್ಷನ್ಸ್) ಹರಪನಹಳ್ಳಿ.
* ಮಹಮದ್ ಶರೀಫ್ ಎಮ್.ಹೆಚ್ (ಕ್ರಿಯೇಟೀವ್ ಕನ್ಸಟ್ರಕ್ಷನ್ಸ್) ಮಂಗಳೂರು.
* ಶಂಕರ್ ಗಡ್ಡದ್ (ಮಂಗಳ ಕನ್ಸಟ್ರಕ್ಷನ್ಸ್) ದಾವಣಗೆರೆ.
* ಅನಿಲ್‌ಕುಮಾರ್ ಮಲ್ವಾನಿ (ಮೈಕಾನ್ ಕನ್ಸಟ್ರಕ್ಷನ್ಸ್) ಹರಿಹರ.
* ಮಲ್ಲಿಕಾರ್ಜುನ್ ಕೈದಾಳ (ಕಾಂಟ್ರ್ಯಾಕ್ಟರ್) ದಾವಣಗೆರೆ.
* ಸುರೇಶ್ ದೇವರ ಬೆಳಕೆರೆ (ಕಾಂಟ್ರ್ಯಾಕ್ಟರ್) ದಾವಣಗೆರೆ.



ಶ್ರೀಮತಿ ಧ್ಯಾಮಮ್ಮ ಕೋಂ|| ಲಕ್ಷಪ್ಪ ಯಕ್ಕನಹಳ್ಳಿ

ಮರಣ: 22/05/2021


**JANATHAVANI** - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte